
# ವರದಿ ಸರದಿ





# ಸ್ವರ್ಣಸೇತು–೨೦೦೫ ಬಿಡುಗಡೆ

**ಜ್ಯೋತಿ ಶೇಖರ್**
ಮಿಲ್ಪೀಟಸ್, ಕ್ಯಾಲಿಫ಼ೋರ್ನಿಯ

ಮೊನ್ನೆ, ಹೀಗೊಂದು ಪ್ರಸೂತಿ ಪ್ರಸಂಗ ನಡೆಯಿತು ನೋಡಿ. ಒಂದೆಡೆ, ಮಗುವಿನ ಆಗಮನಕ್ಕೆ ತರಾತುರಿಯಲ್ಲಿ ಸಿದ್ಧವಾಗುತ್ತಿರುವ ತಂದೆತಾಯಿಯರು. ಇನ್ನೊಂದೆಡೆ, ನಿರೀಕ್ಷಣೆಯಲ್ಲಿ ಕಾತರದಿಂದ ಕೂತ ಬಂಧು ಮಿತ್ರರು. ಎಲ್ಲರ ಮನದಲ್ಲೂ ಒಂದೇ ಪ್ರಶ್ನೆ. ಹುಟ್ಟಿದ ಮಗುವಿನ ರೂಪು, ರೇಖೆ ಹೇಗಿರುತ್ತದೋ ಏನೋ? ಅಷ್ಟರಲ್ಲಿ, ವೈದ್ಯರೊಬ್ಬರು ಬಂದರು. ಅವರೋ ಸಾಮಾನ್ಯ ವೈದ್ಯರಲ್ಲ. ಭಾರತದಿಂದ ಬಂದಂತಹ, ಈವತ್ತಿಗೆ ಅತ್ಯಾವಶ್ಯಕವಾದ ಕಾರ್ಯಕ್ಷೇತ್ರದಲ್ಲಿ ಉನ್ನತ ಪರಿಣತಿ ಹೊಂದಿರುವ ನುರಿತ ತಜ್ಞರು. ಸರಿ, ಇವರ ಕೈಯಿಂದಲೇ ಹೆರಿಗೆ ಸುಸೂತ್ರವಾಗಿ ನೆರವೇರಿತು. ಮುದ್ದಾದ, ಸುಮಾರು ಒಂದು ಪೌಂಡಿನ ಮಗು ಮಾತಾಪಿತರ, ಬಂಧುಬಾಂಧವರ ಕೈಸೇರಿತು. ಎಲ್ಲರ ಮುಖದಲ್ಲೂ ಈಗ ಸಂತೃಪ್ತಿಯ ಕಳೆ. ಮಗುವನ್ನು ತಬ್ಬಿ ಮನೆಗೆ ಓಡುವ ಹಂಬಲ. ಇನ್ನು ಖಂಡಿತಾ ಇವರುಗಳು ರಾತ್ರಿಯೆಲ್ಲಾ ಮಗುವನ್ನು ಹೊತ್ತು ಕೂತಿರುತ್ತಾರೆ. ಹೊಸ ಮಗುವಿರುವ ಮನೆಯಲ್ಲಿ ನಿದ್ದೆ ಸುಳಿದೀತೆ?

ಸೋಜಿಗವೆಂದರೆ ಇದ್ಯಾವುದೂ ಆಸ್ಪತ್ರೆಯಲ್ಲಿ ನಡೆದ ಸಂಗತಿಯಲ್ಲ. ಡಿಸಂಬರ್ ೪ನೇ ತಾರೀಖು, ಉತ್ತರ ಕ್ಯಾಲಿಫ಼ೋರ್ನಿಯ ಕನ್ನಡ ಕೂಟದ ವಾರ್ಷಿಕ ಸಂಚಿಕೆಯ ಬಿಡುಗಡೆ ಸಮಾರಂಭದಲ್ಲಿನ ದೃಶ್ಯ ಇದು. ಹುಟ್ಟಿದ ಹಸುಕಂದ, ಗಂಡೂ ಅಲ್ಲ, ಹೆಣ್ಣೂ ಅಲ್ಲ, ಅತ್ಯಾಕರ್ಷಕ ಮುಖಪುಟವುಳ್ಳ ಪುಸ್ತಕ, "ಸ್ವರ್ಣಸೇತು"! ತಂದೆತಾಯಿಯರೋ, ಮಗುವನ್ನು ಗರ್ಭದಲ್ಲಿ ಪೋಷಿಸುವಂತೆ, ಈ ಸಂಚಿಕೆಯನ್ನು ತಮ್ಮ ಕಂಪ್ಯೂಟರುಗಳಲ್ಲಿರಿಸಿಕೊಂಡು, ಅದರ ಇಂಚಿಂಚನ್ನೂ ತಿದ್ದಿ, ತೀಡಿ, ಅಪ್ಪಟ ಚಿನ್ನದ ರೂಪ ಕೊಟ್ಟ ಸಂಪಾದಕ ಮಂಡಳಿಯ ಸದಸ್ಯರು. ಇನ್ನು ವೈದ್ಯರು, ಕನ್ನಡದ ಪ್ರಮುಖ ಬಂಡಾಯ ಸಾಹಿತಿ, ವಿಮರ್ಶಕ, ಚಿಂತಕ, ಚಲನಚಿತ್ರ ನಿರ್ದೇಶಕ ಪ್ರೊ. ಬರಗೂರು ರಾಮಚಂದ್ರಪ್ಪ. ಸ್ವರ್ಣಸೇತುವಿನ ಆಗಮನಕ್ಕಾಗಿಯೇ ಕಾತರಿಸಿ ಕಾದು, ಕೊನೆಗೆ ಇನ್ನು ಹಲವಾರು ದಿನ ನಿದ್ದೆಗೆಟ್ಟು ಅದರ ಪುಟ ಪುಟವನ್ನೂ ತಿರುಗಿಸಿ, ಪದೇ ಪದೇ ನೋಡಿ ಹೆಮ್ಮೆ ಪಡುವ ಬಂಧುಗಳು ಯಾರಂತೀರ? ಅಲ್ಲಿ ನೆರೆದಿದ್ದ ಕನ್ನಡ ಸಾಹಿತ್ಯ ಪ್ರೇಮಿಗಳು ಮತ್ತು ಕನ್ನಡ ಕೂಟದ ಸದಸ್ಯರು!

ಅಂದು ೧೧ ಗಂಟೆಗೆ ಮಿಲ್ಪಿಟಾಸಿನ ಐ.ಸಿ.ಸಿ. ಸಭಾಂಗಣವನ್ನು ಉತ್ಸುಕರಾಗಿ ತಲುಪಿದ ಸದಸ್ಯರಿಗೆ ರುಚಿಯಾದ ಉಪ್ಪಿಟ್ಟು, ಸಮೋಸ, ಕಾಫಿ ಹಾಗೂ ತಂಪಾದ ಪಾನೀಯಗಳ ಆತಿಥ್ಯ ಸ್ವಾಗತಿಸುತ್ತಿತ್ತು. ಸ್ಮರಣ ಸಂಚಿಕೆಯ ಬಿಡುಗಡೆ ಕಾರ್ಯಕ್ರಮ ಪ್ರಶಾಂತ್ ಕೃಷ್ಣಮೂರ್ತಿಯವರ ಭಾವಗೀತೆಗಳ ಭಾವಪೂರ್ಣ ಗಾಯನದೊಂದಿಗೆ ಪ್ರಾರಂಭವಾಯಿತು. ತದನಂತರ, ವಸುಧಾ ಹೆಗಡೆಯವರು ಮುಖ್ಯ ಅತಿಥಿಗಳಾದ ಪ್ರೊ. ಬರಗೂರು ರಾಮಚಂದ್ರಪ್ಪನವರ ಪರಿಚಯವನ್ನು ಸಭೆಗೆ ಮಾಡಿಕೊಟ್ಟರು. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ೩೦ ವರ್ಷ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರುವ ಪ್ರೊ. ರಾಮಚಂದ್ರಪ್ಪನವರಿಗೆ ಸಾಹಿತ್ಯ, ಸಂಸ್ಕೃತಿ, ಸಿನಿಮಾಗಳಲ್ಲಿ ವಿಶೇಷ ಆಸಕ್ತಿಯಿರುವುದನ್ನು ತಿಳಿಸಿ, ಇವರು ಸಾಮಾಜಿಕ ವ್ಯವಸ್ಥೆಯ ಒಳಸುಳಿಗಳ ಬಗ್ಗೆ ರಚಿಸಿರುವ ಕೃತಿಗಳನ್ನು ಮತ್ತು ನಿರ್ದೇಶಿಸಿರುವ ಹಲವಾರು ಚಲನಚಿತ್ರಗಳನ್ನು ವಸುಧಾ ಹೆಸರಿಸಿದರು.

ಆಮೇಲೆ, ಪ್ರಧಾನ ಸಂಪಾದಕರಾದ ಜನಾರ್ಧನ ಸ್ವಾಮಿಯವರು ಮಾತನಾಡಿ, ಈ ವರ್ಷದ ಸ್ವರ್ಣಸೇತು ಸಂಚಿಕೆಯು ಒಂದು ಉತ್ಕೃಷ್ಟ ಗುಣಮಟ್ಟದ ಪ್ರಕಟಣೆಯಾಗಲು ಕಾರಣವಾದ ವಿಶೇಷ ಅಂಶಗಳನ್ನು ಪಟ್ಟಿ ಮಾಡಿದರು. ಈ ಸಂಚಿಕೆ ಅತ್ಯುತ್ತಮವಾಗಿ ಮೂಡಿಬರಬೇಕೆಂಬ ಧ್ಯೇಯದಿಂದ ಹಗಲೂ ರಾತ್ರಿ ದುಡಿದ ಸಂಪಾದಕೀಯ ಸಮಿತಿಯ ಅನಿಲ ಜೋಶಿ, ಪೂರ್ಣಿಮಾ ರಾಮಪ್ರಸಾದ್, ಪ್ರಭು ಮೂರ್ತಿ, ರವಿ ಕೃಷ್ಣಾ ರೆಡ್ಡಿ, ವಸುಧಾ ಹೆಗಡೆ, ಸಲಹೆಗಾರರಾದ ಹಂ.ಕ.ಕೃಷ್ಣಪ್ರಿಯ ಮತ್ತು ಶಿಕಾರಿಪುರ ಹರಿಹರೇಶ್ವರ, ಕಿರಿಯರ ವಿಭಾಗದ ಜವಾಬ್ದಾರಿಯನ್ನು ನಿರ್ವಹಿಸಿದ ಅಲೋಕ್ ಸುಬ್ಬರಾವ್ ಮತ್ತು ಅದಿತಿ ಕೃಷ್ಣಪ್ರಿಯನ್ ಇವರೆಲ್ಲರಿಗೂ ತಮ್ಮ ಧನ್ಯವಾದಗಳನ್ನು ಅರ್ಪಿಸಿದರು. ಹಾಗೂ, ಈ ಕೃತಿಯು ರೂಪುಗೊಳ್ಳುವುದರಿಂದ ಹಿಡಿದು ಮುದ್ರಣಗೊಂಡು ಹೊರಬರುವವರೆವಿಗೂ, ಹಲವಾರು ಹಂತಗಳಲ್ಲಿ ನೆರವಾದ ವರದಿಗಾರರನ್ನೂ, ಛಾಯಾಚಿತ್ರ ಮತ್ತು ರೇಖಾ ಚಿತ್ರಗಾರರನ್ನೂ, ಮಾರ್ಗದರ್ಶಕರನ್ನೂ, ಅಂತರ್ಜಾಲ ಪತ್ರಿಕಾಕಾರರನ್ನೂ, ಸ್ವಯಂಸೇವಕರನ್ನೂ ಕೃತಜ್ಞತೆಯಿಂದ ಸ್ಮರಿಸಿದರು. ಮುಂದೆ, ಮುಖ್ಯ ಅತಿಥಿಗಳಾದ ಪ್ರೊ. ರಾಮಚಂದ್ರಪ್ಪನವರು ಸಭೆಯ ಕರತಾಡನದ ಅಭಿನಂದನೆಗಳ ನಡುವೆ ಸ್ವರ್ಣಸೇತು ಸಂಚಿಕೆಯನ್ನು ಬಿಡುಗಡೆ ಮಾಡಿದರು. ಅಂದು, ಅದ್ವಿತೀಯ

ಭಾಷಣಕಾರರಾದ ಇವರ ವಿಚಾರ ಧಾರೆಯನ್ನು ಆಲಿಸುವ ಸುಯೋಗ ಬೇ ಏರಿಯಾದ ಕನ್ನಡಿಗರಿಗೆ ಲಭಿಸಿದ್ದು ಪುಣ್ಯವೇ ಸರಿ. ಶ್ರೀಯುತರು ಸ್ವರ್ಣಸೇತುವಿನ ಪ್ರಕಟಣೆಯ ಯಶಸ್ಸಿಗೆ ಎಲ್ಲರಿಗೂ ಅಭಿನಂದನೆ ಸಲ್ಲಿಸಿ, ಇಲ್ಲಿನ ಕನ್ನಡಿಗರು ತಮ್ಮ ಕರುಳಿನ ಕರೆಗೆ ಓಗೊಟ್ಟು ಒಂದು ಅಭ್ಯಾಸಯೋಗ್ಯ ಮತ್ತು ಸಂಗ್ರಹಯೋಗ್ಯ ಸಂಚಿಕೆ ಹೊರತಂದಿರುವದಕ್ಕೆ ಸಂತೋಷ ವ್ಯಕ್ತಪಡಿಸಿದರು. ಸಂಚಿಕೆಯಲ್ಲಿ ಪ್ರಕಟವಾಗಿರುವ "ಹತ್ತು ಮನಗಳು ಹೆಣೆದ ಕಥೆ"ಯನ್ನು ಉದಾಹರಿಸಿ, ಧ್ವಂಸ ಕ್ರಿಯೆಗೆ ಪ್ರಾಮುಖ್ಯತೆ ಸಿಗುತ್ತಿರುವ ಈಗಿನ ಮಚ್ಚು, ಲಾಂಗುಗಳ ಕಾಲದಲ್ಲಿ, ಹತ್ತು ಜನರು ಒಟ್ಟಿಗೆ ಸೇರಿ "ಸೇತು" ಸಂವೇದನೆಯಿಂದ ಒಂದು ಕಥೆ ಹೆಣೆದು, ಕಟ್ಟುವ ಕ್ರಿಯೆಗೆ ಪ್ರಾಶಸ್ತ್ಯ ನೀಡಿರುವ ವಿಷಯ ನಿಜಕ್ಕೂ ಶ್ಲಾಘನೀಯವೆಂದರು. ತವರಿನಲ್ಲಿ ಎಲ್ಲರೂ ಏಕೀಕರಣಗೊಂಡ ಸುವರ್ಣಕರ್ನಾಟಕವನ್ನು ಮಾನಿಸಿ ಸಂಭ್ರಮಪಡುತ್ತಿರುವ ಸಂದರ್ಭದಲ್ಲಿ, ಸಕಾಲಿಕವಾಗಿ, ದೂರದ ಅಮೇರಿಕದಲ್ಲಿ, ಮನಗಳನ್ನು ಬೆಸೆಯುವ "ಸ್ವರ್ಣಸೇತು"ವಿನೊಂದಿಗೆ ಸುವರ್ಣಮಹೋತ್ಸವವನ್ನು ನಾವು ಹೊರನಾಡ ಕನ್ನಡಿಗರು ಆಚರಿಸುತ್ತಿರುವ ಬಗ್ಗೆ ಹರ್ಷಿಸಿದರು. ಒಂದು ಸಾವಿರ ವರ್ಷಗಳ ಹಿಂದೆ ಪಂಪ ಹೇಳಿದ "ಮನುಷ್ಯ ಜಾತಿ ತಾನೊಂದೇ ವಲಂ" ಎಂಬ ಹೊನ್ನುಡಿಯಂತೆ ಸುವರ್ಣ ಕರ್ನಾಟಕದ ಸಾರ್ಥಕತೆ ಇರುವುದು ಅಕ್ಷರಸ್ಥ ವಿದ್ಯಾವಂತರು ಜಾತೀಯತೆಯನ್ನು ತೊರೆದು ಮನುಷ್ಯ-ಮನುಷ್ಯನ ನಡುವೆ ಸ್ವರ್ಣ ಸೇತುವನ್ನು ನಿರ್ಮಿಸಿದಾಗಲೇ ಎಂದು ಅಭಿಪ್ರಾಯ ಪಟ್ಟರು. ಮೆದುಳಿನ ಭಾಷೆ ಯಾವುದಾದರೂ, ಹೃದಯದ ಭಾಷೆಯಾದ ಮಾತೃಭಾಷೆಯೇ ಮುಖ್ಯ. ಈ ಎದೆಯ ಭಾಷೆ ಮತ್ತು ದನಿಯಲ್ಲಿ ಮಾನವೀಯತೆ ಮೊಳಗಲಿ. ಕನ್ನಡದ ಮುಖಾಂತರ ಮಾನವೀಯ ಮೌಲ್ಯಗಳ ಸಂಚಲನೆಯಾಗಲಿ ಎಂದು ಕಳಕಳಿಯ ಅಪೇಕ್ಷೆ ವ್ಯಕ್ತಪಡಿಸಿದರು.

ನಂತರ, ಬೇಸಿಗೆಯಲ್ಲಿ ನಡೆದ, ಸ್ವರ್ಣಸೇತು ಆಯೋಜಿತ ಚಿತ್ರ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಮುಖ್ಯ ಅತಿಥಿಗಳು ಬಹುಮಾನ ವಿತರಣೆಯನ್ನು ಮಾಡಿದರು. ಮುಂದಿನ ಕಾರ್ಯಕ್ರಮ, ಯು.ಬಿ.ವಾಸುದೇವ್ ಅವರು ಸಿದ್ಧಪಡಿಸಿದ 'ಕರ್ನಾಟಕ ಚಿತ್ರಗಳು' ಎಂಬ ಶೀರ್ಷಿಕೆಯುಳ್ಳ ರಸಪ್ರಶ್ನಾಮಂಜರಿ. ಇದನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಮಧು ಕೃಷ್ಣಮೂರ್ತಿಯವರು, ಪರದೆಯ ಮೇಲೆ ಕರ್ನಾಟಕದ ಹೆಸರಾಂತ ಸಾಹಿತಿಗಳ, ಪ್ರೇಕ್ಷಣೀಯ ಸ್ಥಳಗಳ, ಛಾಯಾಚಿತ್ರಗಳನ್ನು ಬಿತ್ತರಿಸಿ, ನೆರೆದಿದ್ದ ಕನ್ನಡ ಪ್ರೇಮಿಗಳ ಮೆದುಳಿಗೆ ಸೊಗಸಾದ ಕಸರತ್ತು ನೀಡಿದರು.
ಕಾರ್ಯಕ್ರಮದ ಮುಕ್ತಾಯದಲ್ಲಿ ಮಾತನಾಡಿದ, ಈ ವರ್ಷದ ಕನ್ನಡ ಕೂಟದ ಅಧ್ಯಕ್ಷರಾದ ರವಿ ರೆಡ್ಡಿಯವರು, ವರುಷದುದ್ದಕ್ಕೂ ಕನ್ನಡ ಕೂಟದ ಕಾರ್ಯಚಟುವಟಿಕೆಗಳನ್ನು ವರದಿ, ಛಾಯಾಚಿತ್ರ, ಡಿ.ವಿ.ಡಿ.ಗಳ ಮೂಲಕ ಸೆರೆಹಿಡಿದು, ಬಹಳಷ್ಟುಶ್ರಮವಹಿಸಿ ಅದನ್ನು ನೆನಪಿನ ಹೊತ್ತಿಗೆಯಾಗಿ ಪರಿವರ್ತಿಸಿದ ಸ್ವರ್ಣಸೇತು ಸಂಪಾದಕೀಯ ಸಮಿತಿಗೆ ತಮ್ಮ ಹೃದಯಪೂರ್ವಕ ಕೃತಜ್ಞತೆ ಅರ್ಪಿಸಿದರು. ಅಂದವಾದ ಮುಖಪುಟ ರಚಿಸಿದ ಜನಾರ್ಧನ ಸ್ವಾಮಿ, ಜಾಹಿರಾತುಗಳ ಮೂಲಕ ಸಂಚಿಕೆಯನ್ನು ಅರ್ಥಿಕವಾಗಿ ಸ್ವಾವಲಂಬಿಯಾಗಿ ಮಾಡಲು ತಮ್ಮ ಜೊತೆ ಹೆಗಲು ಕೊಟ್ಟು ದುಡಿದ ಪ್ರದೀಪ್ ಸಿಂಹ, ರಂಗನಾಥ್ ಬಂಡೆ, ಪ್ರಕಾಶ್ ಮುನಿಯಪ್ಪ, ನಾರಾಯಣ್ ಸಣ್ಬಡ್ತಿ ಮತ್ತು ಸಂಚಿಕೆಯ ವಿನ್ಯಾಸ ಒದಗಿಸಿ ಸಮಿತಿಯ ಸದಸ್ಯರಷ್ಟೇ ಪರಿಶ್ರಮ ಪಟ್ಟಂತಹ ಶ್ರಿವತ್ಸ ದುರ್ಗಾಪುರ ಅವರಿಗೂ ರವಿ ರೆಡ್ಡಿಯವರು ತಮ್ಮ ವಂದನೆಗಳನ್ನು ಸಲ್ಲಿಸಿದರು. ತಮ್ಮ ಕೋರಿಕೆ ಕಡೆಗಣಿಸದೆ, ನೂರಾರು ಮೈಲಿ ಪ್ರಯಾಣಿಸಿ ಮುಖ್ಯ ಅತಿಥಿಗಳಾಗಿ ಬಂದು, ಕೆಲವು ಉನ್ನತ ಆದರ್ಶಗಳನ್ನು ಬೋಧನೆ ಮಾಡಿದ ಪ್ರೊ. ಬರಗೂರು ರಾಮಚಂದ್ರಪ್ಪನವರಿಗೆ ತಮ್ಮ ಅನಂತ ಧನ್ಯವಾದಗಳನ್ನು ತಿಳಿಸಿದರು. ಹಾಗೂ ಸಂಪಾದಕೀಯ ಮಂಡಳಿಯ ಸದಸ್ಯರೊಡಗೂಡಿ ಪ್ರೊ. ರಾಮಚಂದ್ರಪ್ಪನವರಿಗೆ ಶಾಲು ಹೊದೆಸಿ, ಹಾರ, ಹೂಗುಚ್ಛ ಮತ್ತು ಉಡುಗೊರೆಗಳೊಂದಿಗೆ ಸನ್ಮಾನಿಸಿದರು. ಅಂದಿನ ಎಲ್ಲಾ ಕಾರ್ಯಕ್ರಮಗಳನ್ನೂ ಮಧು ಕೃಷ್ಣಮೂರ್ತಿಯವರು ತಮ್ಮ ಸುಂದರ, ಸಹಜ ಶೈಲಿಯಲ್ಲಿ ಉತ್ತಮವಾಗಿ ನಿರ್ವಹಿಸಿದರು.

ಈ ಸ್ವರ್ಣಸೇತು ಸಂಚಿಕೆಯನ್ನು ನೋಡಿದೊಡನೆ ಮನಸ್ಸು ಸೂರೆಗೊಳ್ಳುವ ವರ್ಣಮಯ ಮುಖಪುಟ. ಇನ್ನು ಒಳಗಡೆ, ಕಣ್ಣಿಗೆ ಕಟ್ಟುವಂತೆ ಬರೆದ ವರದಿಗಳಿವೆ, ಅಂತ:ಕರಣ ಕಲಕುವ ಕಥೆಗಳಿವೆ, ಹೃದಯಕ್ಕೆ ಹತ್ತಿರವಾಗುವ ಕವನಗಳಿವೆ, ಚಿಂತಕರಿಗಾಗಿ ಪ್ರಬಂಧ ಮತ್ತು ಪದಬಂಧಗಳಿವೆ, ಕಚಗುಳಿ ಕೊಡುವ ಹರಟೆ, ನಗೆಚುಟುಕು, ವ್ಯಂಗ್ಯ ಚಿತ್ರಗಳಿವೆ, ಬಾಯಿಚಪಲಕ್ಕೆ ಅಡುಗೆ ವಿಧಾನಗಳಿವೆ! ಜೊತೆಗೆ ಛಾಯಾಚಿತ್ರ, ರೇಖಾಚಿತ್ರಗಳ ಸರಮಾಲೆಯೇ ಇದ್ದು, ಹೊಸ ಪ್ರಯೋಗಗಳಾದ ಹತ್ತು ಬರಹಗಾರರು ಹೆಣೆದ ಕಥೆ ಮತ್ತು ಒಂದು ಅಪೂರ್ಣ ಕಥೆಗೆ ನಾಲ್ಕು ಮುಕ್ತಾಯಗಳೂ ಸಹ ಇವೆ. ಕಿರಿಯರಿಗಾಗಿ ಒಂದೂ ಪೂರಾ ವಿಭಾಗವೇ ಮೀಸಲಾಗಿದ್ದು, ಮಕ್ಕಳಿಂದ ಸಹ ಇಂಗ್ಲೀಷಿನಲ್ಲಿ ಹಲವಾರು ಉತ್ತಮ ಬರಹಗಳಿವೆ. ಅಂತೂ ಬೇಯೇರಿಯಾದ ಸೃಜನಶೀಲ ಕನ್ನಡಿಗರ ಆಶಯದ ಸೆಲೆಯಾಗಿ ಸ್ವರ್ಣಸೇತುವೆಂಬ ಈ ಬಂಗಾರದ ಬೊಂಬೆಯು ನಮ್ಮ ಮಡಿಲು ಸೇರಿದೆ. ಪ್ರತಿವರುಷವೂ ಈ ಕೃತಿಯು ಹೀಗೇ ಮುದ್ದಾಗಿ ಮೂಡಿಬಂದು ಕನ್ನಡ ಪ್ರಿಯರ ಕೈಕೂಸಾಗಿ ಮೆರೆಯಲಿ, ನಲಿಯಲಿ ಎಂದು ಹರಸೋಣ. ◈



# ಸಂಭ್ರಮದ Someಕ್ರಾಂತಿ!

**ಗಣೇಶ್ ಶರ್ಮ ತ್ಯಾಗಲಿ**

ಸ್ಯಾನ್ ಹೋಸೆ, ಕ್ಯಾಲಿಫ಼ೋರ್ನಿಯ

ಇದೇನಪ್ಪ ಇವನು? ಅಚ್ಚ ಕನ್ನಡದ ಸಂಕ್ರಾಂತಿಯನ್ನ ಏನೋ ಚಿತ್ರಾನ್ನ ಮಾಡ್ಬಿಟ್ಟಿದಾನಲ್ಲ ಅಂದುಕೊಂಡ್ರೇನೊ? ಗಾಬರಿಯಾಗಬೇಡಿ; ಉತ್ತರ ಕ್ಯಾಲಿಫ಼ೋರ್ನಿಯ ಕನ್ನಡ ಕೂಟ, ೨೦೦೬ನೇ ವರ್ಷದ ಮೊದಲ ಕಾರ್ಯಕ್ರಮವಾದ ಸಂಕ್ರಾಂತಿಯನ್ನು ಎಷ್ಟು ಸಹೃದಯ ಸಡಗರ ಮತ್ತು ವಿಜೃಂಭಣೆಯಿಂದ ಆಚರಿಸಿತ್ತು ಅಂದರೆ, ಅದನ್ನು someಕ್ರಾಂತಿ ಎಂದೇ ಕರೆಯುವುದು ಸೂಕ್ತ ಅಂತ ನನ್ನ ನಂಬಿಕೆ.

ಜನವರಿ ೨೮ರ ಮೋಡ ಕವಿದ ಮಾಗಿಯ ಸಂಜೆಯಂದು ಸನ್ನಿವೇಲ್ ದೇವಾಲಯದ ಸಭಾಂಗಣವನ್ನು ಪ್ರವೇಶಿಸಿದವರಿಗೆ, ಇದ್ದಕ್ಕಿದ್ದಂತೆ ಖಂಡಾಂತರವಾದಂತೆ ಅನ್ನಿಸಿದ್ದರೆ ಆಶ್ಚರ್ಯವೇನೂ ಇಲ್ಲ. ಮುಂಬಾಗಿಲಿನಲ್ಲೇ, ಬಂದವರ ಗುರುತು ಪರಿಚಯ ಹಚ್ಚಿ, ಆತ್ಮೀಯವಾಗಿ ಮಾತಾಡಿಸಿ, ಎಳ್ಳು ಬೆಲ್ಲ, ಸಕ್ಕರೆ ಅಚ್ಚು ನೀಡಿ ಸಂಕ್ರಾಂತಿಯ ಶುಭ ಕೋರುತ್ತ ನವ-ಸಮಿತಿಯ ಸದಸ್ಯರು ಸ್ವಾಗತಿಸುತ್ತಿದ್ದರು. ಸುತ್ತ ಎಲ್ಲ, ಕರ್ನಾಟಕದ ಹಳ್ಳಿಯ ವಾತಾವರಣ- ಪುಟ್ಟ ಗ್ರಾಮದ ಮನೆ ಮುಂದೆ, ಹೊಸ ಉಡಿಗೆತೊಡಿಗೆ ತೊಟ್ಟ ಹುಡುಗಿಯರಿಬ್ಬರು ಹಬ್ಬದ ಸಂಭ್ರಮದಲ್ಲಿದ್ದರೆ, ಪಕ್ಕದಲ್ಲೇ ಇದ್ದ ಎತ್ತಿನ ಗಾಡಿ, ಹೋರಿ ಓಟದ ನೆನಪನ್ನು ತರುತ್ತಿತ್ತು! ಈ ಸುಂದರ ಗ್ರಾಮೀಣ ಚಿತ್ರಣ, ಸ್ವಾಮಿ ಶ್ರೀಕಂಠಪ್ಪ ಮತ್ತು ಕುಸುಮಾ ಅರಕಲಗೂಡು ಅವರ ಸೃಜನಶೀಲ ಮನಸ್ಸಿನ ಫಲ. ಸರಿಯಾಗಿ ೪ ಘಂಟೆಗೆ, ದಿನದ ಮನೋರಂಜನೆಯ ಸರಣಿ ಆರತಿ ಮೂರ್ತಿಯವರ ಸುಶ್ರಾವ್ಯ ಗಣೇಶನ ಸ್ತುತಿಯಿಂದ ಪ್ರಾರಂಭವಾಯಿತು. ಅದಾದ ಮೇಲಿನ ಮೊದಲ ಕಾರ್ಯಕ್ರಮಗಳು ನಮ್ಮ ಪುಟಾಣಿಗಳದ್ದಾಗಿತ್ತು. ರಾಧಿಕಾ ಉಪಾಧ್ಯಾಯರ ನಿರ್ದೇಶನದಲ್ಲಿ ಕೊರವಂಜಿ ಹಾಡಿಗೆ ಪುಟ್ಟ ಪುಟ್ಟ ಹೆಜ್ಜೆ ಇಡುತ್ತ ಬಂದ ಪುಟ್ಟ ಬಾಲಿಕೆಯರು, ತಮ್ಮ ನೃತ್ಯದಿಂದ ನೆರೆದಿದ್ದ ಜನರ ಮನಸ್ಸನ್ನೇ ನೇರ ಹೊಕ್ಕರು ಎನ್ನಬಹುದು. ನಂತರ ಬಂದ ಹುಡುಗ-ಹುಡುಗಿಯರ ಸುಗ್ಗಿ ಕುಣಿತ ಕೋಲಾಟವಂತೂ, ಜನರನ್ನೂ ತಮ್ಮ ಜೊತೆ ಕುಣಿಸಿತು; ಎಲ್ಲರೂ ಚಪ್ಪಾಳೆ ಹಾಕುತ್ತ ಮಕ್ಕಳೊಡನೆ ತಾವೂ ಕ್ಷಣಕಾಲ ಮಕ್ಕಳಾದರು. ಭವಾನಿ ಕುಮಾರವರು ಈ ಕುಣಿತವನ್ನು ಸಮರ್ಥವಾಗಿ ನಿರೂಪಿಸಿದ್ದರು. ಇದಾದ ಮೇಲೆ, ಜ್ಯೋತಿ ಶೇಖರ್ ಅವರಿಂದ ಸೃಜನಾತ್ಮಕವಾಗಿ ರೂಪಿತವಾದ ಸೋಮನಹಳ್ಳಿಯ ಜಂಬದ ಅಜ್ಜಿ ಗೀತ ರೂಪಕದ ಮಕ್ಕಳು ತಮ್ಮ ಚುರುಕಾದ ಅಭಿನಯ ಹಾಗೂ ತಾಳಕ್ಕೆ ಸರಿಯಾದ ಕುಣಿತದಿಂದ ಸಭಿಕರ ಮನಸ್ಸನ್ನು ಆಕರ್ಷಿಸಿದರು. ಈ ಮೂರೂ ಕಾರ್ಯಕ್ರಮಗಳ ಸುಂದರ ರಂಗಸಜ್ಜಿಕೆ, ಬಣ್ಣ ಬಣ್ಣದ ವಸ್ತ್ರವಿನ್ಯಾಸ ಪ್ರಶಂಸಾರ್ಹವಾಗಿದ್ದವು. ಇಷ್ಟೇ ಅಲ್ಲ; ಮಕ್ಕಳ ನೃತ್ಯ ಮತ್ತು ರೂಪಕಗಳನ್ನು ಯುವ ಸದಸ್ಯೆಯರಾದ ಸುಷ್ಮ ಮತ್ತು ವೈಭವಿಯವರು ಅರ್ಥಪೂರ್ಣವಾಗಿ ನಡೆಸಿಕೊಟ್ಟದ್ದು ಬಹಳ ಯುಕ್ತವಾಗಿತ್ತು.

"ಮುಂದೇನು?" ಅಂತ ಕೇಳುವಷ್ಟರಲ್ಲಿ, ತಮ್ಮ ತಮ್ಮ ಸಮಿತಿಗಳ ಕೆಲಸಕ್ಕೆ ಸರಿಹೊಂದುವ ಚಿತ್ರಗೀತೆಗಳಿಗೆ ಹೆಜ್ಜೆ ಹಾಕುತ್ತ, ೨೦೦೬ನೇ ಸಮಿತಿಯ ಸದಸ್ಯರು ರಂಗಮಂಚವನ್ನು ಪ್ರವೇಶಿಸಿದಾಗ ಎಲ್ಲರಿಗೂ ಅಚ್ಚರಿಯೋ ಅಚ್ಚರಿ! ಈ ಆಸಕ್ತಿಕರ ರೀತಿಯಲ್ಲಿ ಸಮಿತಿಗಳ ಪರಿಚಯವನ್ನು ರೂಪಿಸಿ ನಿರ್ದೇಶಿಸಿದವರು ಕಾವ್ಯ ಕುರ್ಬೂರ್‌ರವರು. ಇದರ ಗುಂಗಿನಲ್ಲೇ ಇದ್ದಾಗ, ಸಂಜೆಯ ಕಾರ್ಯಕ್ರಮ ನಿರೂಪಕರಾದ ರಾಮಪ್ರಸಾದ್ ಮತ್ತು ಮಂಗಳಾ ಕುಮಾರ್, ಬೇ ಏರಿಯದ ಹೊಸ ಕನ್ನಡ ಟೀವಿ ಚಾನಲ್ ಬಗ್ಗೆ ಮಾತಾಡಲು ಪ್ರಾರಂಭಿಸಿದಾಗ, ನೆರದಿದ್ದ ಪ್ರೇಕ್ಷಕರ ಕಿವಿ-ಎಲ್ಲ ಚುರುಕಾದವು; ಕೆಲವರಂತು ಪಕ್ಕದವರನ್ನು, "" "ಯಾವತ್ತಿಂದ? ಏನ್ಕತೆ?" ಎಂದು ಕೇಳುತ್ತಿದ್ದುದ್ದು ಕಂಡುಬಂತು. ಅದರ ಹೆಸರು ಶಂಖ ಟೀವಿ ಮತ್ತು ಅದರ ಮೊದಲ ಕಾರ್ಯಕ್ರಮ ಅಂದೇ ಎಂದು ಗೊತ್ತಾದ ಮೇಲೆ, ಜನರು ನಗುವುದಕ್ಕೆ ಪ್ರಾರಂಭಿಸಿದರು.

ಶಂಖ ಟೀವಿಯ ಸಂಕ್ರಾಂತಿ ವಿಶೇಷ ಕಾರ್ಯಕ್ರಮ ಶಂಖನಾದ ಬಹಳ ವಿನೂತನವಾದ ಪ್ರಯೋಗ. ಮಧುಕಾಂತ್ ಕೃಷ್ಣಮೂರ್ತಿಯವರ ಹಾಸ್ಯದ ಮೂಸೆಯಿಂದ ಬಂದ ನಗುವಿನ ತೀರ್ಥ. ಸಾಮಾನ್ಯವಾಗಿ ವಿಘ್ನೇಶ್ವರನ ಸ್ತುತಿಯಿಂದ ಕಾರ್ಯಕ್ರಮಗಳು ಪ್ರಾರಂಭವಾದರೇ, ಇದು ಶುರುವಾಗಿದ್ದು, ಉಪಯುಕ್ತವಾದ ಮೈಕಾಸುರನ ಪ್ರಾರ್ಥನೆಯಿಂದ! ಅದರ ಫಲವೋ ಏನೋ? ಆಮೇಲೆ ಮೈಕ್ ತೊಂದರೆ ಇರಲೇ ಇಲ್ಲ! ಮೊದಲಿಗೆ, ಮಧುಕಾಂತ್ ಅವರಿಂದ ಏಕವ್ಯಕ್ತಿ ಹಾಸ್ಯ : ಅವರ wonderಕಣ್ಣಿನ ವಕ್ರದೃಷ್ಟಿಯನ್ನು ತಪ್ಪಿಸಿಕೊಂಡ

ವಿಷಯವೇ ಇರಲಿಲ್ಲ ಅನ್ನಬಹುದು; ಗಂಡು ಹೆಣ್ಣಿನ ಮಧ್ಯದ ವಿರಸದಿಂದ ಹಿಡಿದು, ಚಿತ್ರಾನ್ನ-ಸಾರನ್ನದ ರಸದವರೆಗೂ, ಅವರ ವಾಗ್ಝರಿ ಹರಿದಿತ್ತು. ಇದರ ನಂತರ, ಶುಧ್ಧಾಂಗ ಟೀವಿ ಪ್ರಸಂಗ – "ನಿಮ್ಮ ನೆಚ್ಚಿನ ನಟರ ಜೊತೆ ಮಾತಾಡಲು, ೧-೮೦೦-SHANKHAಗೆ ಕರೆ ಮಾಡಿರಿ." ಅನೇಕ ದಂಪತಿಗಳು ಮತ್ತು ದಂ-ಇಲ್ಲದ ಪತಿಗಳೂ ಕೂಡ ಕರೆ ಮಾಡಿ ಪ್ರೇಕ್ಷಕರ ಹೊಟ್ಟೆಹುಣ್ಣಾಗಿಸಿದರು. ಕೋರಿದ ಎಲ್ಲ ನಟರ ಹಾಗೆ ಮಾತಾಡಿದ್ದು ಮಧು ಅವರೇ ಅಂತ ಬಿಡಿಸಿ ಏನು ಹೇಳಬೇಕಾಗಿಲ್ಲ ತಾನೆ? ಸ್ಥಳದಲ್ಲೆ ದೂರವಾಣಿ ಸಂಪರ್ಕ ಏರ್ಪಡಿಸಿದ ಹಾಗೆ ಮಾಡಿ, ನೇರವಾಗಿ ತೆರೆಯ ಮೇಲೆ ಕರೆದವರನ್ನು ಪ್ರದರ್ಶಿಸಿದ ಈ ಬಹು-ಮಾಧ್ಯಮ ಪ್ರಯೋಗ ಯಶಸ್ವಿಯಾಗಿ ಮೂಡಿಬಂತು. ಶಂಖನಾದದ ಕೊನೆ ಪ್ರಸ್ತುತಿ, ಹತ್ತು ಬಾಣಗಳು. ಬೇ-ಏರಿಯ ಚಿತ್ರಪ್ರಿಯರಿಂದ, ಬೆಂಗಳೂರಿನ ಚಿತ್ರರಸಿಕರಿಗೆ, ಹತ್ತು ಕನ್ನಡ ಚಿತ್ರಗಳ ಕಾಣಿಕೆ. ಇವುಗಳ ಕಥೆಗಳನ್ನು ಅರ್ಥ ಮಾಡಿಕೊಳ್ಳಲು ಈ ಚಲನಚಿತ್ರಗಳ ಹೆಸರೇ ಸಾಕು – ಒಂದನ್ನು ಹತ್ತು, ಹತ್ತನ್ನು ನೂರು ಮಾಡುವ ಗೂಗಲ್ ಮತ್ತು ಈಬೇ ಅರ್ಪಿಸುವ ಗೂಬೇ, mental outsideನ 'intel ನಂಜ', ಇತ್ಯಾದಿ. ವೇದಿಕೆಯ ಪಕ್ಕದಲ್ಲೇ ಇದ್ದ ರಜತ ಪರದೆಯ ಮೇಲೆ ಮೂಡಿ ಬರುತ್ತಿದ್ದ ಈ ಚಲನಚಿತ್ರಗಳ ಜಾಹೀರಾತುಗಳನ್ನು, ಶ್ರೀವತ್ಸ ದುಗ್ಲಾಪುರ ಅವರು ಬಹಳ ಆಕರ್ಷಕವಾಗಿ ಸೃಷ್ಟಿಸಿದ್ದರು. ಈ ಎಲ್ಲಾ ಚಿತ್ರಗಳ ನಾಯಕ-ನಾಯಕಿಯರು, ನಮ್ಮ ಕನ್ನಡ ಕೂಟದ ಸದಸ್ಯರೇ ಆಗಿದ್ದು ಮತ್ತೊಂದು ವಿಶೇಷ.

ಏನು ಸ್ವಾಮಿ? ಬರೀ ಮನೋರಂಜನೆ ಮಾತ್ರವೋ ಅಥವಾ ಇನ್ನೇನಾದ್ರೂ ಇತ್ತೋ ಅಂತ ಕೇಳಿದ್ರಾ? ಸರಿಯಾದ ಸಮಯಕ್ಕೇ ಕೇಳಿದಿರಿ. ಸುವರ್ಣ ಕರ್ನಾಟಕ ಪ್ರಶಸ್ತಿ ಗಳಿಸಿ ಹೊರನಾಡ ಕನ್ನಡಿಗರಿಗೆಲ್ಲರಿಗೂ ಹೆಮ್ಮೆ ಉಂಟುಮಾಡಿದ ಶ್ರೀ ವಿಶ್ವನಾಥ ಹುಲಿಕಲ್‌ರ ಅಭಿನಂದನೆಯೇ ಮುಂದಿನ ಕಾರ್ಯಕ್ರಮ. ಕಳೆದ ನಾಲ್ಕುವರ್ಷಗಳಿಂದ ಸಾಹಿತ್ಯ ಗೋಷ್ಠಿ ಯನ್ನು ನಡೆಸಿಕೊಂಡು ಬಂದಿರುವ ಶ್ರೀ ಹುಲಿಕಲ್ ಅವರನ್ನು, ಕನ್ನಡ ಕೂಟ ಶಾಲು ಹೊದೆಸಿ, ಸ್ಮರಣಫಲಕ ನೀಡಿ ಗೌರವಿಸಿತು.

ಮಾಗಿಯ ಚಳಿಯಿಂದ ತಣ್ಣಗಾಗುತ್ತಿದ್ದ ಜನರನ್ನು ಮತ್ತೆ ಬೆಚ್ಚಗೆ ಮಾಡಲು ಬಂದರು ನೋಡಿ, ಅರ್ಚನ ಶೇಖರ್ ಮತ್ತು ತಂಡದವರು. ಗಾಳಿಪಟ ಹಾರಿಸುತ್ತ, ಹಾಡಿಗೆ ತಕ್ಕಂತೆ ಕುಣಿಯುತ್ತ ನೋಡುಗರೆಲ್ಲರನ್ನೂ ಕುಣಿಯುವಂತೆ ಮಾಡಿದರು. ಇನ್ನೂ ಕುಣಿಯುತ್ತಾ ಇದ್ದ ಜನರ ತಲೆಗೂ ಕೆಲಸಕೊಡಲು ಬಂತು, ಮುರಳಿ ಸತ್ಯನಾರಾಯಣರ ನಿರ್ದೇಶನದಲ್ಲಿ ಕೂಟದ ಯುವ ಸದಸ್ಯರಿಂದ ಮನೋರಂಜಕ ರಸಪ್ರಶ್ನೆ ಕಾರ್ಯಕ್ರಮ. ಸಾಮಾನ್ಯ ಜ್ಞಾನದ ಜೊತೆ ನಾನಾ ವಿಧ ಸಮಸ್ಯೆಗಳನ್ನೂ, ಲಘು ಚುಟುಕಗಳನ್ನೂ ಹೊಂದಿದ್ದ ಈ ವಿನೂತನ ಪ್ರಯೋಗ, ಸಭಿಕರನ್ನೂ ಸ್ಪರ್ಧಿಗಳನ್ನಾಗಿಸಿತ್ತು.

ಕಾಲಿಗೂ, ತಲೆಗೂ ಬೇಕಿದ್ದು ಸಿಕ್ಕಮೇಲೆ, ಹೊಟ್ಟೆಯನ್ನು ಹೇಗೆ ಬಿಡೋಕ್ಕಾಗುತ್ತೆ ಹೇಳಿ. ಸಂಕ್ರಾಂತಿಗೆ ಸರಿಯಾಗಿ ಬಿಸಿ ಬಿಸಿ ಖಾರ ಮತ್ತು ಸಿಹಿ ಪೊಂಗಲ್, ಬೋಂಡ, ಮೊಸರನ್ನ, ಉಸುಳಿಯ ಭರ್ಜರಿ ಊಟ ಜನರನ್ನು ಕರೆದಿತ್ತು. ಸಾವಿರಕ್ಕೂ ಹೆಚ್ಚು ಜನ, ಎಲ್ಲೆಂದರಲ್ಲಿ ಸಂಗಡಿಗರೊಡನೆ ಕುಳಿತು, ಊಟದ ಜೊತೆ ಹರಟೆಯನ್ನೂ ಹೊಡೆಯುತ್ತಾ ಇದ್ದಿದ್ದನ್ನು ನೋಡಿದಾಗ, ಇದು ಬರಿ ಸಭೆಯಲ್ಲದೇ ಒಂದು ದೊಡ್ಡ ಕುಟುಂಬವೆನ್ನಿಸಿತು.

ಊಟ ಮುಗಿಸಿ ಬಂದವರನ್ನು ಮನರಂಜಿಸಲು ಸಿದ್ಧವಾಗಿದ್ದರು, ಅಲಮೇಲು ಅಯ್ಯಂಗಾರ್ ಮತ್ತವರ ನಾಟಕ ತಂಡದವರು. ಹೊಸ ಜಗತ್ತಿನ ಹೊಸ ರೀತಿನೀತಿಗಳ ಮಧ್ಯೆ ಸರಿದಾರಿ ಅರಿಯದೆ ತೊಳಲಾಡುತ್ತಿರುವ ಆಧುನಿಕ ಪತಿ-ಪತ್ನಿಯರ ಸಂಬಂಧವೇ ಇವರ ಕುಜದೋಷವೋ? ಶುಕ್ರದೆಸೆಯೋ? ಹಾಸ್ಯ ಪ್ರಹಸನದ ವಸ್ತು. ಇದು ಕೇವಲ ನಗೆನಾಟಕವಾಗದೆ, ಇಂದಿನ ಕಾಲದ ಚಿತ್ರ-ವಿಚಿತ್ರ ಸಂಬಂಧಗಳ ಬಗ್ಗೆ ಹೊಸ ಪ್ರಶ್ನೆಗಳನ್ನು ಕೇಳುತ್ತ, ಹೊಸ ಉತ್ತರಗಳನ್ನು ಅರಸುತ್ತ ಮನಃಪ್ರಚೋದಕವೂ ಆಗಿದ್ದುದು ಇದರ ವೈಶಿಷ್ಟ್ಯ. ಅಂಕಗಳ ಮಧ್ಯೆ ಇದ್ದ ಸಂಧ್ಯಾ ರವೀಂದ್ರನಾಥ್‌ರವರು ಬರೆದ ಮುಕುಟ ಗೀತೆ, ಜನರ ಗಮನವನ್ನು ನಾಟಕದ ಮೇಲೆ ಕೇಂದ್ರೀಕರಿಸಿ-ಇಟ್ಟಿದ್ದರೆ, ನಟ-ನಟಿಯರ ಅಭಿನಯ (ಹುಟ್ಟುಕನ್ನಡಿಗರಾಗದೆ ಹೋದರೂ ಅವರಿಗೆ ಕಡಿಮೆ ಇಲ್ಲದಂತೆ ಅಚ್ಚ ಕನ್ನಡದಲ್ಲಿ ಮಾತಾಡಿ ನಟಿಸಿದ ಕ್ಯಾರೆನ್ ವಾಸುದೇವ್ ಅವರನ್ನು ಇಲ್ಲಿ ವಿಶೇಷವಾಗಿ ನೆನೆಯಬಹುದು), ಸೊಗಸಾದ ರಂಗಸಜ್ಜಿಕೆ ಮತ್ತು ಮೆಲಕುಹಾಕುವಂತಹ ಹಾಸ್ಯ ಮತ್ತು ವ್ಯಂಗ್ಯ ಮಿಶ್ರಿತ, ಕೆಲವು ಬಾರಿ ಕೈಲಾಸಂ ಅವರನ್ನೂ ನೆನಪಿಗೆ ತಂದ – "Diet ಮಾಡೋವ್ರ ಮುಂದೆ ದಮ್ರೋಟ್ ಇಟ್ಟಹಾಗೆ" – ಸಂಭಾಷಣೆ, ನಿಜಕ್ಕೂ 'ನಗುವಿನ ಅಮಲು' ತರಿಸಿತ್ತು.

ಇತ್ತೀಚೆಗೆ ನಮ್ಮನ್ನಗಲಿದ ನಟ ವಜ್ರಮುನಿಯವರ ನೆನಪಿನಲ್ಲಿ ಒಂದು ನಿಮಿಷ ಮೌನ ಆಚರಿಸಿದ ನಂತರ, ವಾಡಿಕೆಯಂತೆ ಅಮೇರಿಕೆಯ ಮತ್ತು ಭಾರತದ ರಾಷ್ಟ್ರಗೀತೆಗಳೊಂದಿಗೆ ಸಂಕ್ರಾಂತಿಯ ಕಾರ್ಯಕ್ರಮ ಮುಕ್ತಾಯಗೊಂಡಿತು. ಹೀಗೆಯೇ, ನಗು-ನಗುತ್ತ ಪೂರ್ತಿ ವರ್ಷವು ಕಳೆಯಲಿ ಎಂಬ ಆಶಯದೊಂದಿಗೆ ಎಲ್ಲರೂ ಪರಸ್ಪರ ಬೀಳ್ಕೊಟ್ಟರು. ◈



# ಹರುಷದ ವರುಷಾರಂಭ

**ಅಪರ್ಣಾ ಶಂಕರ್**
ಮೌಂಟನ್ ವ್ಯೂ, ಕ್ಯಾಲಿಫ಼ೋರ್ನಿಯ

'ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ' ಎಂಬ ಬೇಂದ್ರೆಯವರ ಹಾಡನ್ನು ನೆನಪಿಸುವಂತೆ ಈ ವರ್ಷವೂ ಕೂಡ  ಯುಗಾದಿಯು ಬೇ ಏರಿಯಾದ ಕನ್ನಡ ಕುಟುಂಬದವರಲ್ಲಿ ಹೊಸ ಹರುಷವನ್ನು ತಂದಿತ್ತು. ಕೆ.ಕೆ.ಎನ್.ಸಿ,ಸಮಿತಿಯವರು ಏಪ್ರಿಲ್ ೨೨, ೨೦೦೬ರಂದು ಸನ್ನಿವೇಲ್ ದೇವಸ್ಥಾನದ ಸಭಾಂಗಣದಲ್ಲಿ 'ವ್ಯಯ'ನಾಮ ಸಂವತ್ಸರ ಪ್ರಾರಂಭದ ಸಿಹಿಯನ್ನು ಎಲ್ಲರೊಂದಿಗೆ ಹಂಚಿಕೊಳ್ಳಲು ಮನರಂಜನಾ ಕಾರ್ಯಕ್ರಮವನ್ನು ಯೋಜಿಸಿದ್ದರು. ಬಹಳ ಮುಂಚಿನಿಂದಲೇ ಈ ಕಾರ್ಯಕ್ರಮಕ್ಕಾಗಿ ಸಂಭ್ರಮದಿಂದ ಕಾಯುತ್ತಿದ್ದ ಕನ್ನಡ ಸಮುದಾಯಕ್ಕೆ, ಯುಗಾದಿಯ ಬೇವಿನ ಕಹಿಯನ್ನೂ ನೆನಪಿಸುವಂತೆ, ಕನ್ನಡಿಗರ ಹೃದಯ ಸಾಮ್ರಾಜ್ಯಾಧೀಶ ಡಾ. ರಾಜ್ ಕುಮಾರ್ ಅವರು ದೈವಾಧೀನರಾದ ಸುದ್ದಿ ಆಘಾತವನ್ನುಂಟು ಮಾಡಿತ್ತು. ಕನ್ನಡ ನಾಡಿನ ಧ್ರುವತಾರೆಯ ಸ್ಮರಣೆಗಾಗಿ ಮುಂಬಾಗಿಲಲ್ಲೇ ಪ್ರಮುಖವಾದ ಸ್ಥಳದಲ್ಲಿ ಅವರ ಭಾವಚಿತ್ರವನ್ನಿಡಲಾಗಿತ್ತು. ಪಕ್ಕದಲ್ಲಿ ಆಗತಾನೆ ಅರಳಿದ ಹೂಗಳು, ಸುಂದರವಾದ ಜಲಪಾತ, ಹೊಸ ಚಿಗುರಿನ ಗಿಡ ಮರಗಳಿಂದ ಕೂಡಿರುವ ಚಿತ್ರಣ, 'ವಸಂತ ಬಂದ' ಎಂಬ ಶೀರ್ಷಿಕೆಯಿಂದ ಕಂಗೊಳಿಸುತಿತ್ತು. ಎಂದಿನಂತೆ ಸಮಿತಿಯ ಸದಸ್ಯರು ಎಲ್ಲರನ್ನೂ ಆದರದಿಂದ ಸ್ವಾಗತಿಸುತ್ತಿದ್ದರು.

ವೇದಿಕೆಯ ಮೇಲೆ ಒಂದು ಕಡೆ ನಟಸಾರ್ವಭೌಮ ಡಾ. ರಾಜ್ ಕುಮಾರ್ ಅವರ ಭಾವಚಿತ್ರಕ್ಕೆ ಹಾರವನ್ನರ್ಪಿಸಿ ದೀಪ ಬೆಳಗಲಾಗಿತ್ತು. ಕನ್ನಡ ಭಾಷೆಯ ಬೇರೆ ಬೇರೆ ಪ್ರಾಂತ್ಯಗಳ ಆಡುಭಾಷೆಯ ವೈವಿಧ್ಯತೆಯ ಬಗ್ಗೆ ಚರ್ಚೆಯೊಂದಿಗೆ ನಿರೂಪಕಿಯರಾದ ವೀಣಾ ಹಾಗೂ ಶರ್ಮಿಳರವರು ಹೇಳಿದ ಸಮಯಕ್ಕೆ ಸರಿಯಾಗಿ ೪ ಗಂಟೆಗೆ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಮೊದಲಿಗೆ 'ಕನ್ನಡ ಕಲಿ' ಮಕ್ಕಳು ಸಂಧ್ಯಾ ರವೀಂದ್ರನಾಥ್ ಅವರು ಸಂಯೋಜಿಸಿರುವ 'ವಿಧಾತ ನೀಡಿದ ವರದಾನ' ಹಾಗೂ 'ಕನ್ನಡ ಕಲಿ ಕ್ಲಾಸಿನಲ್ಲಿ' ಹಾಡುಗಳನ್ನು ರತ್ನ ಜಾವಗಲ್ ಅವರ ನಿರ್ದೇಶನದಲ್ಲಿ ಬಹಳ ಇಂಪಾಗಿ ಹಾಡಿದರು. ನಂತರ ಬಂದ ಬಾಲಕ ಅನಿರುದ್ಧ ಕುಮಾರ್ 'ಬಾರೇ ಬಾರೆ ಚೆಂದದ ಚೆಲುವಿನ ತಾರೆ' ಎಂದು ಬಹಳ ಸೊಗಸಾಗಿ ಕೀ ಬೋರ್ಡ್ ನುಡಿಸಿದ. ಜನರೆಲ್ಲ ಅದೇ ಗುಂಗಿನಲ್ಲಿರುವಾಗಲೇ ಶುರುವಾಯಿತು 'ಒಂದು ದಿನ ಪೆದ್ದನ ಹೆಂಡ್ತಿ' ಎಂಬ ಪದ್ಯಕ್ಕೆ ವಸಂತ ರವಿಶಂಕರ್ ಅವರ ನಿರ್ದೇಶನದಲ್ಲಿ ಎಳೆಯರ ಉಲ್ಲಾಸದ ನೃತ್ಯ.

ಸಮಿತಿಯ ಅಧ್ಯಕ್ಷರಾದ ರಮೇಶ್ ಜಾವಗಲ್ ಹಾಗೂ ಅವರ ಪತ್ನಿ ರತ್ನ ಅವರು ಈ ವರ್ಷ ಹೊಸದಾಗಿ ಹಮ್ಮಿಕೊಂಡಿರುವ 'ಕನ್ನಡ ಕಲಿ' ಕಾರ್ಯಕ್ರಮದ ವರದಿ ಒಪ್ಪಿಸುವುದರೊಂದಿಗೆ, ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಕನ್ನಡ ಪಾಠ ಕಲಿಸುತ್ತಿರುವ ಶಿಕ್ಷಕಿಯರನ್ನು ಸಭಿಕರಿಗೆ ಪರಿಚಯಿಸಿದರು. ಮುಂದಿನ ಕಾರ್ಯಕ್ರಮ 'ಕಿನ್ನರ ಗಾನಲಹರಿ'; ಜಯಂತಿ ಉಮೇಶ್ ಅವರು ನಿರ್ದೇಶಿಸಿರುವ ಹಾಡುಗಳನ್ನು ಮಕ್ಕಳು ಅಲ್ಲಿರುವವರೆಲ್ಲರಲ್ಲೂ ಭಕ್ತಿಭಾವಬರಿಸುವಂತೆ ಹಾಡಿದರು. ತನ್ಮಯರಾಗಿ ಹಾಡುಗಳನ್ನು ಸವಿಯುತ್ತಿದ್ದ ಪ್ರೇಕ್ಷಕರನ್ನು ರಂಜಿಸಲು ಮೀನಾ ಸುಬ್ಬರಾವ್ ನಿರ್ದೇಶನದಲ್ಲಿ 'ಯುಗಾದಿ ನವೋಲ್ಲಾಸ ನೃತ್ಯ'ದೊಂದಿಗೆ ಮತ್ತೊಂದು ಮಕ್ಕಳಗುಂಪು ನರ್ತಿಸಿತು. ಆ ಮೇಲೆ ಜನರನ್ನು ನಕ್ಕು ನಲಿಸಲು ವೇದಿಕೆಗೆ ಬಂದಿತ್ತು 'ಗಾಂಪರ ಗುಂಪು'. ಲಕ್ಷ್ಮಿ ಶ್ರೀನಾಥರ ನಿರ್ದೇಶನದ ಸಹಾಯದಿಂದ ಮಕ್ಕಳು ಗಾಂಪರು ಹೊಳೆದಾಟುವ ಪ್ರಸಂಗವನ್ನು ನಗು ಬರಿಸುವಂತೆ ನಟಿಸಿದರು.

ಇದೀಗ ತಾನೆ ನಮ್ಮನ್ನಗಲಿದ ನಲ್ಮೆಯ ನಾಯಕನಾದ ಡಾ. ರಾಜ್ ಕುಮಾರವರಿಗೆ, ಅವರ ಅಭಿಮಾನಿ ದೇವರುಗಳು ೧ ನಿಮಿಷಕಾಲ ಮೌನವಾಚರಿಸಿ ಶ್ರದ್ಧಾಂಜಲಿ ಅರ್ಪಿಸಿದರು. ಕೆ.ಕೆ.ಎನ್.ಸಿ.ಯ ಅಣ್ಣಾವ್ರು ಎಂದೇ ಪ್ರಖ್ಯಾತವಾಗಿರುವ ಅಶೋಕ್ ಕುಮಾರವರು ಡಾ. ರಾಜ್ ಬಗ್ಗೆ ಕೆಲವು ಮಾತುಗಳನ್ನಾಡಿ, ಅವರ ಗೋಕಾಕ್ ಚಳುವಳಿಯ ಜ್ಞಾಪಕಾರ್ಥವಾಗಿ, ಸುಪ್ರಸಿದ್ಧವಾದ 'ನಾನಿರುವುದೆ ನಿಮಗಾಗಿ, ನಾಡಿರುವುದು ನಮಗಾಗಿ' ಹಾಡನ್ನು ಹಾಡಿ ಸಭಿಕರನ್ನು ಮಂತ್ರಮುಗ್ಧಗೊಳಿಸಿದರು. ನಂತರ ಅವರ ಕೆಲವು ಚಿತ್ರದ ತುಣುಕುಗಳನ್ನು ವೇದಿಕೆಯ ಪಕ್ಕದಲ್ಲಿದ್ದ ಪರದೆಯ ಮೇಲೆ ಮೌನದಿಂದ ಪ್ರದರ್ಶಿಸಲಾಯಿತು. ಜನರೆಲ್ಲಾ ಇನ್ನೂ ಅವರ ನೆನಪಿನಲ್ಲೇ ಇರುವಾಗ, ಇದೇ ತಿಂಗಳ ೩೦ನೇ ತಾರೀಖು ಡಾ. ರಾಜ್ ಕುಮಾರವರ ಆತ್ಮಕ್ಕೆ ಶಾಂತಿಕೋರಲು ಶ್ರದ್ಧಾಂಜಲಿಯನ್ನು ಏರ್ಪಡಿಸಿರುವುದಾಗಿ ಕೆ.ಕೆ.ಎನ್.ಸಿ. ಅಧ್ಯಕ್ಷರಾದ ರಮೇಶ್ ಜಾವಗಲ್ ಘೋಷಿಸಿದರು. ಕೂಡಲೇ ಶುರುವಾಗಿತ್ತು ಎಲ್ಲಾರೂ

ಕಾತುರದಿಂದ ಕಾಯುತ್ತಿದ್ದ 'ಹಾಡೊಂದ ನಾ ಹಾಡುವೆನು'- ವಿಶೇಷ ಅಂತ್ಯಾಕ್ಷರಿ ಕಾರ್ಯಕ್ರಮ. ೧೯೬೩ರ ಕುಲವಧು ಚಿತ್ರದ 'ಯುಗ ಯುಗಾದಿ ಕಳೆದರೂ' ಹಾಡನ್ನು ಲಯಬದ್ಧವಾಗಿ ಹಾಡಿಕೊಂಡು ಬಂದ ಅಂತ್ಯಾಕ್ಷರಿ ಕಾರ್ಯಕ್ರಮದ ನಿರೂಪಕಿಯರಾದ ಪೂರ್ಣಿಮಾ ರಾಮಪ್ರಸಾದ್ ಹಾಗೂ ಜ್ಯೋತಿ ಶೇಖರ್ ಅವರು ಆ ಪ್ರದರ್ಶನವನ್ನು ಕನ್ನಡಿಗರ ಕಣ್ಮಣಿ ಡಾ. ರಾಜ್ ಕುಮಾರ್ ಅವರಿಗೆ ಅರ್ಪಿಸಿದ್ದೇವೆಂದು ಹೇಳಿದಾಗ ಜನರೆಲ್ಲರೂ ಹರ್ಷೋದ್ಗಾರ ಮಾಡಿದರು. ಶರಾವತಿ, ಗೀತಾಂಜಲಿ ಮತ್ತು ಮಾಧುರ್ಯ ತಂಡಗಳು ಸ್ಪರ್ಧೆಗೆ ಸಿದ್ಧವಾಗಿ ಕುಳಿತಿದ್ದರು. ತೀರ್ಪುಗಾರರಾದ ಅಶೋಕ್ ಕುಮಾರ್ ಹಾಗೂ ನಿರ್ದೇಶಕರಾದ ರಾಮಪ್ರಸಾದ್ ಮತ್ತು ಶುಭಾ ಶ್ರೀನಾಥ್ ವೇದಿಕೆಯ ಮೇಲಿದ್ದರು. ಈ ಕಾರ್ಯಕ್ರಮದಲ್ಲಿ ಬರೀ ಆ ಮೂರು ತಂಡದವರಿಗೆ ಮಾತ್ರವಲ್ಲದೆ, ಬಿಡುವಿನ ಸಮಯದಲ್ಲಿ ಪ್ರೇಕ್ಷಕರಿಗೂ ಕೂಡ ಭಾಗವಹಿಸಲು ಅವಕಾಶಮಾಡಿಕೊಡಲಾಗಿತ್ತು. ಪ್ರಥಮ ಸುತ್ತು ಅಂತ್ಯಾಕ್ಷರಿ ಮುಗಿದ ಮೇಲೆ 'ಅಣ್ಣಾವ್ರ ಭಕ್ತ ನಂ. ೧' ಬಿರುದನ್ನು ಕವಿರತ್ನ ಕಾಳಿದಾಸ ಚಿತ್ರದ 'ಬೆಳ್ಳಿಮೂಡಿತೋ ಕೋಳಿಕೂಗಿತೋ' ಹಾಡನ್ನು ಅಣ್ಣಾವ್ರಂತೆಯೇ ಹಾಡಿದ ಸುಧೀರ್ ನಗರ್‌ಕರ್ ಅವರಿಗೆ ನೀಡಲಾಯಿತು. ಎರಡನೇ ಸುತ್ತು ಹಾಡಿನ ರಾಗ ಕೇಳಿ, ಅದನ್ನು ಗುರುತಿಸುವುದಾಗಿತ್ತು. ವಿರಾಮದಲ್ಲಿ ಅಣ್ಣಾವ್ರ dialogue ಚೆಂದದಿಂದ ಹೇಳಿದ ಸತೀಶ್ ಹೆಡ್ಡಸೆ ಅವರಿಗೆ 'ಅಣ್ಣಾವ್ರ ಭಕ್ತ ನಂ ೨' ಬಿರುದನ್ನು ಕೊಡಲಾಯಿತು. ಹಾಡಿನ ಚರಣವನ್ನು ಕೇಳಿ ಪಲ್ಲವಿ ಹಾಡುವುದು ಮೂರನೆಯ ಸುತ್ತು. ದೇವತಾ ಮನುಷ್ಯ ಚಿತ್ರದ 'ನಿನ್ನಂತ ಅಪ್ಪ ಇಲ್ಲ' ಹಾಡಿಗೆ ತಮ್ಮ ಮಗಳೊಂದಿಗೆ ಸಂಭ್ರಮದಿಂದ ಕುಣಿದ ಗಿರೀಶ್ ಹೆಗ್ಡೆ ಅವರಿಗೆ 'ಅಣ್ಣಾವ್ರ ಭಕ್ತ ನಂ ೩' ಬಿರುದು ಸಿಕ್ಕಿತು. ಇಷ್ಟೆಲ್ಲಾ ಸಂಭ್ರಮದ ನಂತರ ಗೀತಾಂಜಲಿ ತಂಡವು ಮೊದಲ ಸ್ಥಾನವನ್ನೂ, ಮಾಧುರ್ಯ ತಂಡವು ಎರಡನೇ ಸ್ಥಾನವನ್ನು ಪಡೆದಿದೆಯೆಂದು ಘೋಷಿಸಲಾಯಿತು.

'ಒಬ್ಬಟ್ಟಿನೂಟ'ದ ಬಗ್ಗೆ ಪ್ರಕಟಿಸಿದ ಮೇಲಂತೂ ಎಲ್ಲರೂ ಊಟದ ಸಮಯಕ್ಕೆ ಕಾಯುವಂತಿತ್ತು. ಅದಕ್ಕೆ ಮುಂಚೆ 'ಶ್ರೀ ಕೃಷ್ಣಲೀಲಾ' ನೃತ್ಯ ನಾಟಕ ಶುರುವಾಯಿತು. 'ಕೃಷ್ಣಾ ನೀ ಬೇಗನೆ ಬಾರೋ' ಎಂದು ಕಾದು ಕುಳಿತಿರುವ ಯಶೋದೆಯ ಬಳಿ ಬಂದ ಮುದ್ದು ಕೃಷ್ಣ, ಕಂಸವಧೆ, ಉಗ್ರಸೇನನ ಪಟ್ಟಾಭಿಷೇಕ, 'ನೀನ್ಯಾಕೊ ನಿನ್ನ ಹಂಗ್ಯಾಕೊ' ಎಂದು ಸಮ್ಮೋಹಕ ನೃತ್ಯಗಳನ್ನು ಪ್ರದರ್ಶಿಸಲಾಯಿತು. ಎಲ್ಲರ ಗಮನ ಮನರಂಜನೆಯಿಂದ ಹೊಟ್ಟೆಯ ಕಡೆಗೆ ಹೊರಡುವ ಸಮಯಕ್ಕೆ ಸರಿಯಾಗಿಯೇ ಇತ್ತು, ಭೋಜನದ ವಿರಾಮ. ಮಯೂರಿ ರೆಸ್ಟೊರಾಂಟಿನಿಂದ ತರಿಸಲಾದ ನಾನ್, ನವರತನ್ ಕುರ್ಮಾ, ಬಿಸಿಬೇಳೆಭಾತು, ಮೊಸರನ್ನ, ಪಕೋಡ ಮತ್ತು ಒಬ್ಬಟ್ಟು ಬಹಳ ರುಚಿಯಾಗಿದ್ದವು.

ಪುಷ್ಕಳವಾದ ಊಟ ಸವಿದು ಬಂದ ಸಭಿಕರಿಗೆ 'ಕರ್ನಾಟಕ ವಸ್ತ್ರವಿಶೇಷ' ಎಂಬ ವಿಶೇಷ ನೃತ್ಯ ಕಾರ್ಯಕ್ರಮದ ಮೂಲಕ ಕರ್ನಾಟಕದ ಸಾಂಪ್ರದಾಯಿಕ ಉಡುಗೆ ತೊಡುಗೆಗಳನ್ನು ಪರಿಚಯಿಸಲು ಭಾಗವಹಿಸಿರುವ ಮಕ್ಕಳು ಕಾತುರರಾಗಿ ಕಾದಿದ್ದರು. ಮೊದಲಿಗೆ ಬೆಂಗಳೂರಿನ ಉಡುಗೆ ನಂತರ ಹಳ್ಳಿಜನರ ಪದ್ಧತಿಯ ಉಡುಗೆ ಪ್ರದರ್ಶಿಸಿದರು. 'ಮೇರಿ ಮೇರಿ ಮೇರಿ, ಐ ಲವ್ ಯು' ಎಂದು ಕ್ರಿಶ್ಚಿಯನ್ ರೀತಿಯಂತೆ ಅಂಗಿ-ಶರಾಯಿ ತೊಟ್ಟು ಫ್ರೋಕ್ ಹಾಕಿದ ಹುಡುಗಿಯೊಂದಿಗೆ ನಟಿಸುತ್ತ ಬಂದ ಹುಡುಗನನ್ನು ಕಂಡ ಕೂಡಲೆ ಕೇಳಿಸಿತ್ತು ಪ್ರೇಕ್ಷಕರ ಮೆಚ್ಚಿನ ಕರತಾಡನ. ನಂತರ ನರ್ತಿಸುತ್ತಾ ಬಂದರು ಚೆಂದದ ಉಡುಪಿನ ಮುಸ್ಲಿಂ ಕನ್ಯೆಯರು, 'ಅಡವಿದೇವಿಯ ಕಾಡು ಜನಗಳ' ಎನ್ನುತ್ತಾ ಕಾಡಿನ ಜನಾಂಗದ ಬಟ್ಟೆ ತೊಟ್ಟ ಮಕ್ಕಳು. "ಅಬ್ಬಬ್ಬಾ ಉಡುಗೆ ತೊಡುಗೆಯಲ್ಲಿ ಎಷ್ಟೊಂದು ವೈವಿಧ್ಯತೆ" ಎಂದು ಕೊಳ್ಳುತ್ತಿರುವಾಗಲೇ, 'ಹೇಗಿದೆ ನಮ್ ದೇಶ ಹೇಗಿದೆ ನಮ್ ಭಾಷೆ' ಎಂದು ಕುಣಿಯುತ್ತ ಇಡೀ ನಾಟ್ಯವೃಂದವೇ ಮತ್ತೊಮ್ಮೆ ವೇದಿಕೆಯ ಮೇಲೆ ಬಂದಿತ್ತು.

ಕೆ.ಕೆ.ಎನ್.ಸಿ.ಯ ವಾರ್ಷಿಕ ಸಂಚಿಕೆಯಾದ 'ಸ್ವರ್ಣಸೇತು' ಸಮಿತಿಯು ಏರ್ಪಡಿಸಿದ್ದ ಯುಗಾದಿ-೨೦೦೬ ಕಥಾಸ್ಪರ್ಧೆಯಲ್ಲಿ ಮೊದಲ ಮೂರು ಬಹುಮಾನಗಳನ್ನು ಪಡೆದ ಜ್ಯೋತಿ ಶೇಖರ್, ವಿಶ್ವನಾಥ್ ಹುಲಿಕಲ್ ಮತ್ತು ಮಂಗಳಾ ಕುಮಾರ್ ಅವರಿಗೆ ತೀರ್ಪುಗಾರರಲ್ಲೊಬ್ಬರಾದ ಸಂಧ್ಯಾ ರವೀಂದ್ರನಾಥ್ ಅವರು ಬಹುಮಾನ ವಿತರಿಸಿದರು. ಇನ್ನಿಬ್ಬರು ತೀರ್ಪುಗಾರರಾದ ಡಾ. ಗುರುಪ್ರಸಾದ ಕಾಗಿನೆಲೆ ಮತ್ತು ತ್ರಿವೇಣಿ ಶ್ರೀನಿವಾಸರಾವ್ ಅವರ ಪರವಾಗಿ ಕಥೆಗಳ ಬಗ್ಗೆ ಅನಿಸಿಕೆಗಳನ್ನು ಸಂಧ್ಯಾ ಅವರು ಸಭಿಕರೊಡನೆ ಹಂಚಿಕೊಂಡರು. ಸ್ಪರ್ಧೆಗೆ ಕತೆಯನ್ನು ಕಳುಹಿಸಿದ್ದ ಕತೆಗಾರರೆಲ್ಲರಿಗೂ ಸಂತೋಷವಾಗುವಂತೆ, ಅವರ ಕತೆಗಳನ್ನು ಈ ವರ್ಷದ ಪತ್ರಿಕೆಯಲ್ಲಿ ಪ್ರಕಟಿಸುವ ವಿಷಯ ತಿಳಿಸಲಾಯಿತು. ಅಂದಿನ ಕೊನೆಯ ಕಾರ್ಯಕ್ರಮವಾದ 'ದಾಸರು ಕಂಡಂತೆ ಶ್ರೀ ಕೃಷ್ಣನ ಚಿತ್ರಣ' ನೃತ್ಯ ನಾಟಕವನ್ನು ಪಂಪ ಕಲಾವಿದರು ಬಹಳ ಮನೋಜ್ಞವಾಗಿ ಪ್ರಸ್ತುತಪಡಿಸಿದರು. ನಿರ್ಮಲಾ ಮಾಧವ ಅವರು ನಿರ್ದೇಶಿಸಿ ಭಾಗವಹಿಸಿದ ಈ ನಾಟ್ಯದ ವಿಶೇಷವೆಂದರೆ, ವಿದ್ವಾನ್ ಗೋಪಿನಾಥ ದಾಸರ ಮೂರು ತಲೆಮಾರುಗಳ ಅಪರೂಪದ ಪ್ರದರ್ಶನ. ಅವರ ಮಗ, ಮೊಮ್ಮಗಳು ಹಾಗೂ ಮರಿಮಗಳು ಬಹಳ ಹೆಮ್ಮೆಯಿಂದ ತಮ್ಮ ಪಾತ್ರವನ್ನು ನಿರ್ವಹಿಸಿದರು. ಹೀಗೆಯೇ ತುಂಬಿದಮನದಿಂದ ಜನರು ರಾಷ್ಟ್ರಗೀತೆಯೊಂದಿಗೆ ಪರಸ್ಪರ ಬೀಳ್ಕೊಟ್ಟರು. ◈



# ಆಟವ್ಪೋ, ನೋಟವ್ಪೋ, ಊಟವ್ಪೋ...

**ಅಶೋಕ ಹಂದಿಗೋಳ**

ಫ್ರೀಮಾಂಟ್, ಕ್ಯಾಲಿಫ಼ೋರ್ನಿಯ

ಈ ಸರ್ತೆ ನಮ್ಮ ಬೇ ಏರಿಯಾಕ್ಕ ವಸಂತಕಾಲರಾಯ ಸ್ವಲ್ಪ ತಡಾ ಆಗಿ ಬಂದ ಅಂತ ನೀವು ಕೇಳಿರ್ಬೇಕಲ್ರಿ? ಮಾರ್ಚು, ಏಪ್ರಿಲ್‌ನ್ಯಾಗ ಸೈತೆ ಮಳಿ ಹೊಡದಿದ್ದ ಹೊಡದಿದ್ದು. ನನಗಂತೂ ಛೆಂದಾಗಿ ಎಂದ ಬಿಸಲು ಬಿದ್ದೀತಪಾ ಅನ್ನಿಸಿಬಿಟ್ಟಿತ್ರಿ! ಮೇ ತಿಂಗಳದಾಗ ಸ್ವಲ್ಪು ಹೊರಪು ಬಿದ್ದು 'ಅಡ್ಡಿಯಿಲ್ಲ...ಕಡೀಕೂ ಸ್ಪ್ರಿಂಗು ಬಂತಲ್ರಿ!' ಅಂತ ಸಮಾಧಾನಪಡೂದರ ಕೂಡ ನಮ್ಮ ಉತ್ತರ ಕ್ಯಾಲಿಫ಼ೋರ್ನಿಯ ಕನ್ನಡ ಕೂಟದವರು ನಡಿಸಿಕೊಡೊ 'ಕ್ರೀಡಾದಿನ'ದೊಳಗ ಭಾಗವಹಿಸಾಕ್ಕ ಸದಸ್ಯರು ಭಾಳ ಉತ್ಸಾಹದಿಂದ ಕಾಯಾಕಹತ್ತಿದ್ರು.

ಮೇ ೨೦ನೇ ತಾರೀಖು, ಶನಿವಾರ, ಸ್ಯಾನ್ ಹೋಸೆಯೊಳಗ ಮುರ್ಡೋಕ್ ಪಾರ್ಕಿನ್ಯಾಗ ಸೂರ್ಯಾನ ನಿದ್ದಿ ಮುಗಿಯೂಕ್ಕಿಂತ ಮದ್ಲನ ನಮ್ಮ ಕೂಟದ ಕೆಲವು ಉತ್ಸಾಹೀ ಸದಸ್ಯರು ಅವತ್ತಿನ ಎಲ್ಲಾ ಆಟದ ಜಾಗ ಗುರ್ತು ಹಾಕಿ ಫ಼ುಲ್ ತಯಾರಿ ಮಾಡಿದ್ರು. ಎಂಟೂವರಿ ಹೊಡಿತಿದ್ದಂಗ ಕೂಟದ ಸದಸ್ಯರಷ್ಟ ಅಲ್ಲದ, ಸಣ್ಣ-ಸಣ್ಣ ಹುಡುಗ್ರು, ಹದಿವಯಸ್ಕರು, ಹಿರೇರು ಎಲ್ಲಾರು ಸಣ್ಣಾಗಿ ಬರಾಕಹತ್ತಿದ್ರು. ಬಂದವರಿಗೆಲ್ಲ ಬಿಸೆ-ಬಿಸೆ ಉಪ್ಪಿಟ್ಟು (ವಿದ್ಯಾ ಗುರಿಕಾರ್), ಛಾ/ಕಾಫ಼ಿ (ಗಂಗಾಧರ್ ಮೂರ್ತಿ/ರೇಖಾ ಶಿವಪ್ಪ), ಮತ್ತ ಹುಡುಗ್ರಿಗೆಲ್ಲ ಡೋನಟ್ಟಿನ ವ್ಯವಸ್ಥಾ ಮಾಡಿದ್ರು. ಎಲ್ಲಾರದೂ ಫಳಾರ ಮುಗಿತಿದ್ದಹಾಂಗನ ಆಟದ ಚಟುವಟಿಕಿ ಸುರುವಾದ್ವು.

ಪಾರ್ಕಿನ ಒಂದು ಕಡೆ ರಾಜಿ, ಲತಾ, ಶರ್ಮಿಳ, ಶುಭಾ, ಕಾವ್ಯ, ಚಂದ್ರಶೇಖರ್ ಮತ್ತ ಇನ್ನೂ ರಗಡ ಮಂದಿ ಸ್ವಯಂಸೇವಕರ ಕೂಡ ಮಕ್ಕಳ ಪಂದ್ಯಗಳ್ನ ನಡಸಾಕ ಸುರು ಮಾಡಿದ್ರು. ಆರು ವರ್ಷದವರು, ಆರರಿಂದ ಎಂಟು ವರ್ಷದವರು ಮತ್ತ ಒಂಭತ್ತು ವರ್ಷದವರು ಹೀಂಗ ಮಕ್ಕಳ್ನ ಬ್ಯಾರ-ಬ್ಯಾರೆ ತಂಡಾ ಮಾಡಿ ಓಡೂದು, ಪೊಟ್ಯಾಟೊ ರೇಸು, ಹಾಪಿಂಗು, ಕಪ್ಪೆ ಜಿಗಿತ - ಹೀಂಗ ಒಂದಾದ ಮ್ಯಾಲ ಒಂದರಂತ ಸ್ಪರ್ಧಾ ನಡಿಸಿಕೊಟ್ರು. ಭಾಗವಹಿಸಿದ ಹುಡುಗರ್ ಉತ್ಸಾಹ, ಅವರವರ ಅಪ್ಪಾ-

ಅವ್ವಾರ ಹುರಿದುಂಬಿಸೋ ಚೀಯರಿಂಗು, ನೊಡಾಕ್ಕಹತ್ತಿದ್ ಮಂದಿ ಚಪ್ಪಾಳಿ - ಇವೆಲ್ಲಾ ಎಲ್ಲಾರ ಮನಸ್ಸು ಸೆಳದಿದ್ವು ನೋಡ್ರಿ. ಅದರೊಳಗ ಈ ಎಲ್ಲಾ ಚಟುವಟಿಕೆಗಳನ್ನ ಕ್ಯಾಮರಾದೊಳಗ ಸೆರಿಹಿಡಿಯೂದಕ್ಕ ಕೂಟದ ಉತ್ಸಾಹೀ ಸದಸ್ಯರಾದ ರವಿಶೇಖರ್ ಪಾದರಸದಹಾಂಗ ಎಲ್ಲಾಕಡೆ ಓಡ್ಯಾಡತಿದ್ರು. ಈ ವರದಿ ಬರಿಯೂ ಜವಾಬ್ದಾರಿ ಹೊತ್ತ ನಾನು ಸಾಧ್ಯಾದಷ್ಟು ಪಾರ್ಕಿನ ಒಂದು ತುದಿಯಿಂದ ಇನ್ನೊಂದ ತುದಿಮಟ ಏನೇನ್ ನಡದದ ಅಂತ ಓಡ್ಯಾಡಿ ಕಣ್ಣಿಡೋದ್ರೊಳಗ ಭೋಲೋ ವ್ಯಾಯಾಮ ಆತು.

ಮಕ್ಕಳ ಆಟದ ಮೈದಾನದ ಕಡಿಯಿಂದ ಇನ್ನೊಂದ್ಕಡೆ ವಾಲಿಬಾಲ್ ಸುರು ಆಗೇತ್ಯೋ ಇಲ್ಲೋ ಅಂತ ನಾ ನೋಡಾಕ ಹೊಂಟಾಗ....ನಮ್ಮ ಕೂಟದ ಖಜಾಂಚಿ ಆನಂದವರು ಒಬ್ಬ ಮಹನೀಯರನ್ನ 'ಇವರು ಗೊತ್ತಿರ್ಬೇಕಲ್ಲ.. ನಿಮಗ' ಅಂತ ಅವರ ಹೆಸರು ಹೇಳ್ಲಾರ್ದನ ಪರಿಚಯ ಮಾಡಿಕೊಟ್ಟಾಗ ನಾ ಅವರ ಕೈ ಕುಲುಕಿ ಮಗ್ಗಲಕ ಸರದು 'ಅಂದ..ಹಾಂಗ ಇವರು ಯಾರ್ರೀ...ಗುರ್ತ ಸಿಗವಲ್ರು' ಅನ್ನೂವಾಗ ಆ ಮಹನೀಯರು ತಮ್ಮ ಬಿಸಿಲನ ಚೆಶ್ಮಾ ತಗದ್ರು. ಏನು ಆಶ್ಚರ್ಯ ಅಂತೀನಿ. ಅವರು ಬ್ಯಾರೆ ಯಾರೂ ಅಲ್ಲ...ನಮ್ಮವ್ರ ಆದ ಕನ್ನಡಾ ರಂಗಭೂಮಿ ಮತ್ತ ಸಿನಮಾ ನಟ ರಮೇಶ್ ಭಟ್. "ನೀವೆಲ್ಲಾ ಇಷ್ಟು ಕನ್ನಡದ ಮಂದಿ ಇಲ್ಲಿ ಸೇರಿರೂ ವ್ಯಾಳ್ಯಾದಾಗ ಬಂದು ನಿಮ್ಮೆಲ್ಲಾರ್ನೂ ಭೆಟ್ಟಿ ಆಗೂ ಅವಕಾಶ ಹ್ಯಾಂಗ ಕಳ್ಕೋತೀನಿ ನೀವ ಹೇಳ್ರಿ" ಅಂದ್ರು ಅಭಿಮಾನದ್ಲೆ. ಅವರ 'ನೋಡ್ರಿ ಸರ..ನಾವಿರೂದ ಹೀಂಗ' ನಾಟಕದಿಂದ ಹ್ಯಾಂಗ ಕನ್ನಡ ಕಲಾಭಿಮಾನಿಗಳ ಮನಸ್ಸಿನ್ಯಾಗ ಮನಿ ಮಾಡಿದ್ರು ಅಂತ ಹಳೆ ನೆನಪನ್ನ ಮೆಲಕು ಹಾಕಾಕಹತ್ತಿದ್ದೆ. ಅವರ ಸುತ್ಲೂ ಅವರ ಅಭಿಮಾನಿಗಳು ಗುಂಪುಗಟ್ಟಿ ಆತ್ಮೀಯತೆಯಿಂದ ಮಾತಾಡ್ಸಾಕ್ ಹತ್ತಿದ್ರು.

ಹದಿವಯಸ್ಕರಿಗೆ ಸುಮುಖ್ ಮತ್ತು ಚೇತಸ್, ಬಾಸ್ಕೆಟ್ ಬಾಲ್ ಸ್ಪರ್ಧಾ ನಡ್ಸಿದ್ರು. ನಮ್ಮ ಮುಂದಿನ ಪೀಳಿಗೀ ಆ ಹುಡುಗರನ್ನ ನೋಡಿ ಅವರಿಗೆ ಭೋಲೊ ತರಬೇತಿ ಸಿಕ್ಕರ ಭವಿಷ್ಯದೊಳಗ ಯಾವ ಕಾಲೇಜ್ ಬಾಸ್ಕೆಟ್ ಬಾಲ್ ಲೆವೆಲ್ಲಿಗೂ ಕಮ್ಮಿ ಆಗೂದಿಲ್ಲ ಅನ್ನಸ್ತು.

ಇನ್ನೊಂದು ಕಡೆ ವಾಲಿಬಾಲ್ ಸ್ಪರ್ಧಾ ಜೋರಾಗಿ ನಡದಿತ್ತು. ಸದಾ, ಮಹೇಶ್, ಸತೀಶ್ ಸ್ವಾಮಿಯವರು ಅದನ್ನ ನಡಸಾಕ ಹತ್ತಿದ್ರು. ಆ ಫ಼ೈನಲ್ ಮ್ಯಾಚಿನೊಳಗ

ಹೆಚ್ಚಾಗಿ ಗಂಡಸ್ರ ಇದ್ರುನೂ ಕೆಲವು ಹೆಣ್ಮಕ್ಳು ಅವರಿಗಿಂತ ಹೆಚ್ಚಿಗಿ ಹುರುಪಿಲೇ ಆಡಾಕಹತ್ತಿದ್ದು ನನಗ ವಿಶೇಷ ಅನ್ನಸ್ತು.

ಪಾರ್ಕಿನ ಮತ್ತಿನ್ನೊಂದು ಬಾಜು ಹಿರಿಯರು ಅಗದಿ ಹುಮ್ಮಸ್ಸಿನಿಂದ ಚೌಕಾ–ಬಾರಾ ಆಡಾಕಹತ್ತಿದ್ರು. ಸುಧಾ ಅವರು ನಡಿಸಿಕೊಟ್ಟ ಈ ಪಂದ್ಯದೊಳಗ ಹದಿನಾರು ಮಂದಿ ಹಿರೇರು ಭಾಗವಹಿಸಿದ್ದು ಅಷ್ಟ ಅಲ್ಲ ಅವರ ಹುರುಪು ಯಾವ ಹರೇದವ್ರಿಗಿಂತೂ ಕಡ್ಮಿ ಇರ್ಲಿಲ್ಲ. ಮತ್ತ ಇನ್ನೊಂದು ಕಡೆ ಕೆಲವ್ರು 'ಫ್ರೆಂಡ್ಲಿ' ಕ್ರಿಕೆಟ್ ಆಡಾಕ್ ಹತ್ತಿದ್ರು. ಇನ್ನು ಕೆಲವು ಮಕ್ಕಳು ಪಾರ್ಕಿನ್ಯಾಗಿನ ಜೋಕಾಲಿ, ಮಂಗ್ಯಾನಬಾರ್, ಜಾರ್‍ಗುಂಡಿ, ಮತ್ತ ತಿರುಗುಗಾಲಿ ಆಡೂದ್ರೊಳಗ ಪ್ರಪಂಚಾನ ಮರತಿದ್ರು.

ಇಷ್ಟೆಲ್ಲ ಆಡೂದ್ರೊಳಗ ಮಂದಿಗೆ ಹೊಟ್ಟಿ ಮಸ್ತ್ ಹಸ್ದಿತ್ತು ಅನ್ರಿ. ಈ ಸರ್ತೆ ವಿಶೇಷ ಅಂದ್ರ 'ಓಸ್ಯಾಟ್' (One School At A Time) ಸಂಸ್ಥಾದವರು ಎಲ್ಲಾರ್‍ಗೂ ಊಟದ (ಆಹಾರಮೇಳ) ವ್ಯವಸ್ಥಾ ಮಾಡಿದ್ರು. ಸಂಸ್ಥಾದ ಸ್ವಯಂಸೇವಕರು ನಮ್ಮ ಕನ್ನಡನಾಡಿನ ಮೂರು ಪ್ರಮುಖ ಸೀಮೆಗಳನ್ನ ಪ್ರತಿನಿಧಿಸೋ, ಬಾಯಾಗ ನೀರು ಬರಸೂಹಾಂಗ ರುಚಿ ರುಚಿ, ಘಮ–ಘಮ ಅಡಿಗಿ ತಮ್ತಮ್ ಮನಿಯೊಳಗನ ಮಾಡಿ ತಂದಿದ್ರು. ಉತ್ತರ ಕರ್ನಾಟಕ, ಬೆಂಗಳೂರು/ಮೈಸೂರು, ಮತ್ತ ಕರಾವಳಿ/ಮಲೆನಾಡಿನ ಸ್ಪೆಶಲ್ ಭಕ್ಷ್ಯಗಳನ್ನ ನೋಡಿದ ಕೆಲವರಿಗೆ ಏನು ತಿನ್ಲಿ ಏನು ಬಿಡ್ಲಿ ಅಂತ ಸಂಧಿಗ್ಧದೊಳಗ ಸಿಕ್ಕಾಕ್ಕೊಂಡ್ರ ಇನ್ನು ಕೆಲವ್ರು ಎಲ್ಲಾನೂ ಒಂದು ಕೈ ನೋಡೇ ಬಿಡೂಣು ಅಂತ ಪಣ ತೊಟ್ಟಿದ್ರು ಅನ್ಸುತ್ತ. ಚಪಾತಿ, ಬದ್ನೀಕಾಯಿ ಪಲ್ಲೆ, ಹೆಸರುಕಾಳಿನ ಪಲ್ಲೆ, ಟಮಾಟಿ ಪಚಡಿ, ಕೆಂಪು ಮೆಣಸಿನಕಾಯಿ ಚಟ್ನಿ (ಕೆಂಪಿಂಡಿ), ಮೊಸರಿನ ಕೂಡ ಶೇಂಗಾಚಟ್ನಿ ಮತ್ತ ಗುರೆಳ್ಳಚಟ್ನಿ, ಶೇಂಗಾ ಹೋಳಿಗಿ (ಮ್ಯಾಲೆ ತುಪ್ಪ), ಚಿತ್ರಾನ್ನ, ಲೆಮನನ್ನ, ವಾಂಗಿಭಾತ್, ಮೊಸರನ್ನ, ಪತ್ರೊಡಿ, ಮದ್ದೂರ್ ವಡಿ, ರವಾ ಉಂಡಿ, ಮೈಸೂರ್‌ಪಾಕು, ನೀರಮಜ್ಜಿಗಿ, ಫಲಾಮೃತ....ಹೀಂಗ ಒಂದ.. ಎರಡ.. ಎಲ್ಲಾ ಆಹಾರ ಮಾರಿ ಬಂದ ಪೂರಾ ಉತ್ಪನ್ನ ಓಸ್ಯಾಟ್ ಸಂಸ್ಥಾಕ್ಕ ದಾನಾ ಮಾಡೋ ಉದಾತ್ತ ಧ್ಯೇಯ ಇದ್ದಿದ್ದಕ್ಕ ಏನೋ ಎಲ್ಲಾ ಭಕ್ಷ್ಯ ಡಬಲ್ ರುಚಿ ಆಗಿದ್ವು. ಶ್ರೀವತ್ಸ ದುಗ್ಲಾಪುರ ಅವರ ನೇತ್ರತ್ವದೊಳಗ ಜಯಶ್ರೀ ಹಂಡ್ಯಾಲ್, ಅಶೋಕ ಹಂದಿಗೋಳ, ವಿಜಯಾ ಜೋಶಿ, ಅಂಜನ್/ಸ್ಮಿತಾ, ಮಂಗಳಾ ಕುಮಾರ್ ಇನ್ನೂ ರಗಡ ಮಂದಿ ಸಹಾಯದಿಂದ ಅಹಾರಮೇಳ ಭಾಳ ಯಶಸ್ವೀ ಆತು.

ಊಟ ಆದಮ್ಯಾಲೆ ಹಿರೇರ್‍ಗೆ 'ಸಂಗೀತ ಖುರ್ಚಿ' ಸ್ಪರ್ಧಾನ ಸುಧಾ ಮತ್ತ ನರೇನ್ ನಡಿಸಿಕೊಟ್ರು. ಒಂದು ಡಜನ್ ಮಂದಿ ಭಾಗವಹಿಸಿದ ಈ ಸ್ಪರ್ಧಾ ಅಗದಿ ತುರುಸಿಲೆ ನಡೀತು. ಶುಭಾ ಮತ್ತು ಅರ್ಚನಾ ನಡಿಸಿಕೊಟ್ಟ ಮಹಿಳೆಯರ ಥ್ರೋಬಾಲ್ ಸ್ಪರ್ಧೆಯೊಳಗ 'ರಾಕೆಟ್ಸ್', 'ಜಿಗಿ–ಜಿಗಿ', 'ಶೂಟಿಂಗ್ ಸ್ಟಾರ್ಸ್', ಮತ್ತ 'ಗರ್ಲ್‌ಫ್ರೆಂಡ್ಸ್' ಭಾಗವಹಿಸಿದ್ರು. ಅಷ್ಟರಾಗ ಕಡೀ ಎರಡು ತಂಡ ಹಣಾಹಣಿ ಆಡಿದರು ಫೈನಲ್ ಮ್ಯಾಚಿನ್ಯಾಗ. ಕ್ರೀಡಾದಿನದದೊಳಗನ ಅತೀ ತೀಕ್ಷ್ಣ ಪಂದ್ಯ ಅಂತ ಹೇಳಬಹುದಾದ ಆ ಮ್ಯಾಚಿನ್ಯಾಗ 'ಶೂಟಿಂಗ್ ಸ್ಟಾರ್ಸ್' ಗೆದ್ರು. ಸೋಮಶೇಖರ್ ಅವರು ನಡಿಸಿಕೊಟ್ಟ ಕ್ರಿಕೆಟ್ಟಿನ ಮ್ಯಾಚು ಯಾವ ರಣಜಿ ಮ್ಯಾಚಿಗೂ ಕಡ್ಮಿ ಇರ್ಲಿಲ್ಲ. ತಮ್ಮ ಜಬರ್ದಸ್ತ್ ಬ್ಯಾಟಿಂಗಿನಿಂದ ಮಿಂಚಿ, ಎಲ್ಲಾರ ಮನಸ್ಸು ಸೆಳೆದ 'ಚೆಂಡುಮಾರುತ' ತಂಡ ಪ್ರಥಮ ಬಹುಮಾನ ಗಳಿಸಿದ್ರು. ಈ ಆಟದೊಳಗೂ ಕೆಲವ್ರು ಹೆಣ್ಮಕ್ಕಳು ಭಾಗವಹಿಸಿದ್ದು ಮ್ಯಾಚಿಗೆ ಕಳಾ ಕಟ್ಟಿತ್ತು.

ಸಂಜಿ ಆಗತಿದ್ದಂಗ ಚುರ್ಮುರಿ, ಛಾ ವ್ಯವಸ್ಥಾ ಮಾಡಿದ್ರು. ಅಷ್ಟೊತ್ತಿಗೆ ಆಟದೊಳಗ ಗೆದ್ದ ಹುಡುಗ್ರು "ಎವ್ವಾ...ನಮಗ ಬಹುಮಾನಾ ಇನ್ನ ಯಾವಾಗ್ ಕೊಡತಾರ...." ಅಂತ ಕಿರಿ–ಕಿರಿ ಮಾಡ್ಲಿಕ್ಕೆ ಹತ್ತಿದ್ರು. ಹ್ಯಾಂಗೂ ಅಷ್ಟೊತ್ತಿಗೆ ಎಲ್ಲಾ ಆಟಾನೂ ಮುಗುದಬಿಟ್ಟಿದ್ವು. ಬಹುಮಾನ ವಿತರಣ ಸಮಾರಂಭಾನ ಕೂಟದ ಪದಾಧಿಕಾರಿಗಳಾದ ನರೇನ್ ಮತ್ತ ಕಾವ್ಯ ನಡಿಸಿಕೊಟ್ರು. ಛೆಂದನ, ದೊಡ್ಡ–ದೊಡ್ಡ ಕಪ್ಪು ಗಳಿಸಿದ ಹುಡುಗರ್ ಮಾರಿ ಖುಶಿಯಿಂದ ಲಕ–ಲಕ ಹೊಳೀತಿದ್ವು.

ಹಾಂಗ ನೋಡಿದ್ರ ಅವತ್ತ ಮಳಿ ಬರೂ ಚಾನ್ಸು ಅದಾವಂತ ಕೇಳಿದ್ದೆ. ಆದ್ರ ಪುಣ್ಣೇಕ ಮಳಿ ಬರೂ ಲಕ್ಷಣಾನೂ ಇರಲ್ಲಿಲ್ಲ ಮತ್ತ ಬಿಸಲು ಜೋರಾಗೇನ್ ಇರ್ಲಿಲ್ಲ. ಕ್ರೀಡಾದಿನದ ಆಮಂತ್ರಣದೊಳಗ ಬರದಹಾಂಗ 'ಆಟವ್ರೋ, ನೋಟವ್ರೋ, ಊಟವೊ! ಒಟ್ಟಿನಲ್ಲಿ ಬನ್ನಿ. ಒಂದು ಆಹ್ಲಾದಕರ ದಿನವನ್ನು ಅನುಭವಿಸಲು ಖಂಡಿತ ಬನ್ನಿ' – ಬಂದವ್ರು ಯಾರೂ ಸ್ವಲ್ಪನೂ ನಿರಾಶ್ ಆಗ್ಲಿಲ್ಲ. ಕೆಲವ್ರು ಸುಸ್ತಾಗಿ "ಇವತ್ತ ಮೈ–ಕೈ ಸ್ವಲ್ಪ ಹೆಚ್ಚಿಗೀನ ನೋಯಾಕ್ ಹತ್ಯಾವಲ್ಲ" ಅಂತಿದ್ರ ಇನ್ನು ಕೆಲು ಹುಡುಗ್ರು "ಯೆಮ್ಮಾ..ಬೇ...ನಾ ಗೆದ್ದಿದ್ ಕಪ್ ನೋಡಬೆ....ಎಷ್ಟು ಛೆಂದ ಐತೆಲ್ಲಾ?" ಅಂತ ಹೆಮ್ಮಿಯಿಂದ ಮನಿಗೆ ಹೊಂಟ್ರ ಇನ್ನು ಕೆಲವು ಮನಿಗೆ ಹೋಗೂ ಬದ್ಲಿ 'ರಾಮ, ಶ್ಯಾಮ, ಭಾಮ' ದೊಳಗ ಕಮಲ್ ಹಾಸನ್ ಹ್ಯಾಂಗ ಧಾರವಾಡ ಕನ್ನಡಾ ಮಾತಾಡ್ಯಾನ ಆಂತ ಆ ಪಿಚ್ಚರ್ ನೋಡಾಕ ಹೋಗೂ ಲೆಕ್ಕಾ ಹಾಕಾಕ್ ಹತ್ತಿದ್ರು ಅನ್ನೂದು ಬ್ಯಾರೇ ಮಾತು ಬಿಡ್ರಿ. ◈



# ಕನ್ನಡಕಲಿಗಳ ದಿನ

**ಪ್ರಭು ಮೂರ್ತಿ**
ಫ್ರೀಮಾಂಟ್, ಕ್ಯಾಲಿಫೋರ್ನಿಯ

ಒಮ್ಮೆ ಅಕ್ಬರನು ಬೀರ್‌ಬಲ್ಲನಿಗೆ ನಾಲ್ಕು ಜನ ಮೂರ್ಖರನ್ನು ಕರೆತರಲು ಆಜ್ಞಾಪಿಸಿದನಂತೆ. ಬೀರ್‌ಬಲ್ಲನು ಮರುದಿನ ಇಬ್ಬರನ್ನೇ ಕರೆತಂದೂ ಆಜ್ಞೆಯನ್ನು ಈಡೇರಿಸಿದನಂತೆ! ಇನ್ನಿಬ್ಬರು ಯಾರು? ...ನಿಮ್ಮ ಊಹೆ ಸರಿ! ಈ ಕತೆಯನ್ನು ಅಚ್ಚುಕಟ್ಟಾಗಿ ನಿರೂಪಿಸಿದವರು ಕೆ. ಕೆ. ಎನ್. ಸಿ.ಯ 'ಕನ್ನಡಕಲಿ' ತರಬೇತಿಯ ಮಕ್ಕಳು. ಕಳೆದ ಮೇ ೨೭ರಂದು ಶನಿವಾರ ಮಿಲ್ಪಿಟಸ್‌ನ ಇಂಡಿಯ ಕಮ್ಯುನಿಟಿ ಸೆಂಟರ್‌ನಲ್ಲಿ, ಈ ಫೆಬ್ರುವರಿಯಿಂದ ನಡೆದುಬಂದ ಈ ತರಬೇತಿಯ ಸಮಾರೋಪವನ್ನು 'ಕನ್ನಡಕಲಿ ದಿನ'ವೆಂದು ಆಚರಿಸಲಾಯ್ತು. ಕಾರ್ಯಕ್ರಮಕ್ಕೆ ಕನ್ನಡಕಲಿಯಲ್ಲಿ ಪಾಲ್ಗೊಂಡಿದ್ದ ಮಕ್ಕಳು, ಅವರ ತಂದೆತಾಯಂದಿರು, ತರಬೇತಿಯ ಅಧ್ಯಾಪಕವರ್ಗ ಹಾಗೂ ಇನ್ನೂ ಅನೇಕರು ಬಂದಿದ್ದರು. ಕಾರ್ಯಕ್ರಮವನ್ನು ತರಬೇತಿಯ ಹಿರಿಯ ಮಕ್ಕಳು, ಪ್ರಾಂಶುಪಾಲರಾದ ಸಂಧ್ಯಾ ರವೀಂದ್ರನಾಥ್‌ರವರು ರಚಿಸಿ ರಾಗಸಂಯೋಜಿಸಿದ್ದ 'ಕೌಸಲ್ಯಜಾತ ಶ್ರೀರಘುರಾಮ ಪಾಲಿಪನೆ' ಎಂಬ ಗೀತೆಯೊಂದಿಗೆ ಪ್ರಾರಂಭಿಸಿದರು.

ನಂತರ 'ಬನ್ನಿ ಬನ್ನಿ ಮಕ್ಕಳೆ ಕಥೆಯ ನಾನು ಹೇಳುವೆನು' ಎಂದು ಶುರುವಾದ ನೃತ್ಯರೂಪಕದಲ್ಲಿ ಹಿರಿಯ ಮಕ್ಕಳು ಸೀತಾಸ್ವಯಂವರದ ಪ್ರಸಂಗವನ್ನು ಅಭಿನಯಿಸಿದರು. ರಾಮಲಕ್ಷ್ಮಣಾದಿಗಳ ಜನನ, ತಾಟಕೀಸಂಹಾರ, ಮಾರೀಚ ಮತ್ತು ಸುಬಾಹುಗಳ ಉಪಟಳದ ಪರಿಹಾರ, ಅಹಲ್ಯೆಯ ಶಾಪವಿಮೋಚನೆ, ಮಿಥಿಲೆಗೆ ಹೋಗುವುದು, ಶಿವಧನುಸ್ಸನ್ನು ರಾಮನು ಮುರಿಯುವುದು, ಸೀತೆ ರಾಮನನ್ನು ವರಿಸುವುದನ್ನೆಲ್ಲವನ್ನೂ ವೇಷಾಯುಧಗಳೊಡನೆ ಅಭಿನಯಿಸಿ ತೋರಿಸಿದರು. ಈ ರೂಪಕದ ಗೀತೆಯನ್ನು ಸರದಿಯ ಮೇಲೆ, ಅಭಿನಯಿಸಿದ ಆ ಮಕ್ಕಳೇ ಹೇಳಿದರು. ಅವರ ಕನ್ನಡದ ಉಚ್ಚಾರ ಸ್ಪಷ್ಟವಾಗಿತ್ತು. ಗೀತೆಯನ್ನು ರಚಿಸಿ ನಿರ್ದೇಶನ ಮಾಡಿದ್ದ ಸಂಧ್ಯಾ ರವೀಂದ್ರನಾಥ್‌ರವರು ಕೇವಲ ಎರಡೇ ವಾರದಲ್ಲಿ ಹುರುಪಿನಿಂದ ತಯಾರಿಮಾಡಿಕೊಂಡು ಪ್ರದರ್ಶನ ನೀಡಿದ ಮಕ್ಕಳನ್ನು ಅಭಿನಂದಿಸಿದರು. ತಾಟಕಿ, ಮಾರೀಚ, ಸುಬಾಹುಗಳ ಪಾತ್ರಗಳನ್ನು ಮಾಡಲು ಮಕ್ಕಳು ತೋರಿದ ಉತ್ಸಾಹದ ಬಗ್ಗೆ ಹೇಳಿದಾಗ ಪೋಷಕರೊಬ್ಬರು ಮನೆಯಲ್ಲಿ ಅದಕ್ಕೆ ಆಗುವ ಅಭ್ಯಾಸವನ್ನು ನೆನಪಿಸಿ ನಗೆಅಲೆಯನ್ನು ತೇಲಿಬಿಟ್ಟರು. ಸಂಧ್ಯಾರವರಿಗೆ ಇನ್ನು ಮುಂದೆ ಯುದ್ಧಕಾಂಡವನ್ನು ನಿರೂಪಿಸಲು ಪ್ರೇರಣೆ ಬಂದಿರಬಹುದೇನೋ?

ಕಿರಿಯರ ಇನ್ನೊಂದು ತಂಡ "ಬಲವಂತ ಮಾಡಿ ಕೆಲಸಮಾಡಿಸುವುದಕ್ಕಿಂತ ನಗುನಗುತ್ತ ಮನಸ್ಸನ್ನು ಗೆದ್ದು ಮಾಡಿಸುವುದು ಲೇಸು" ಎಂಬ ವಾದವನ್ನು ಈಸೋಪನ ಕತೆಯೊಂದರ ಮೂಲಕ ನಿರೂಪಿಸಿದಾಗ ಕೆಲವು ತಂದೆತಾಯಿಯರು ಅಸಹಾಯಕತೆಯ ನಿಟ್ಟುಸಿರನ್ನು ಬಿಟ್ಟರಲಿಕ್ಕೂ ಸಾಕು. ನಂತರ ಬಂದ ಐದು ಮಕ್ಕಳು five little ducks ಎಂಬ ಆಂಗ್ಲದ ಶಿಶುಗೀತೆಯನ್ನು ಆಧರಿಸಿದ 'ಐದು ಬೆಕ್ಕಿನ ಮರಿ ಮಂಚದ ಮೇಲೆ' ಎಂಬ ಶಿಶುಗೀತೆಯನ್ನು ಹಾಡುತ್ತಾ ಅಭಿನಯ ಮಾಡಿ ತೋರಿಸಿದರು. ಇನ್ನೊಂದು ತಂಡ ರಾಜರತ್ನಂರವರ 'ರೊಟ್ಟಿ ಅಂಗಡಿ ಕಿಟ್ಟಪ್ಪ ನನಗೊಂದು ರೊಟ್ಟಿ ತಟ್ಟಪ್ಪ'ವನ್ನು ಹಾಡಿ ಅಭಿನಯಿಸಿದರು. ಎಲ್ಲರೂ ಯವುದೇ ಅಳುಕಿಲ್ಲದೇ ಕನ್ನಡದಲ್ಲಿ ತಮ್ಮತಮ್ಮ ಸಾಲುಗಳನ್ನು ಹೇಳಿ ಎಲ್ಲರ ಪ್ರಶಂಸೆಪಡೆದರು. ಈ ಮಕ್ಕಳನ್ನು ತಯಾರು ಮಾಡಿದವರು ಕನ್ನಡಕಲಿಯ ಅಧ್ಯಾಪಕಿಯರಾದ ಪೂರ್ಣಿಮ ರಾಮಪ್ರಸಾದ್, ಮೋನಿಕ ವೆಂಕಟೇಶ್ ಮೂರ್ತಿ, ಅಪರ್ಣ ಶಂಕರ್ ಮತ್ತು ಸವಿತ ಸಾತನೂರ್. ಬಳಿಕ 'ಹಕ್ಕಿಗೆಲ್ಲಾ ಮಾತುಬಂತು ಈಗೀಗ' ಎಂಬ ಎಚ್. ಎಸ್. ವೆಂಕಟೇಶ್ ಮೂರ್ತಿಯವರ ಭಾವಗೀತೆಯ ಹಿನ್ನೆಲೆಗೆ ಹಿರಿಯ ವಿದ್ಯಾರ್ಥಿನಿಯರಾದ ರಕ್ಷಾ ಮತ್ತು ಅಕ್ಷತಾ ತಾವೇ ಸಂಯೋಜನೆ ಮಾಡಿಕೊಂಡಿದ್ದ ಡಾನ್ಸನ್ನು ಮಾಡಿದರು.

ಈ ಕಳೆದ ಹಲವು ತಿಂಗಳುಗಳು ಸ್ವಯಂಸೇವಕರಾಗಿ ಬೇ ಏರಿಯಾದ ಕನ್ನಡದ ಮಕ್ಕಳಿಗೆ ತಾಯ್ನುಡಿಯನ್ನು ನುಡಿಯಲು, ಓದಲು ಮತ್ತು ಬರೆಯಲು ಕಲಿಸಲಿಕ್ಕೆ ಶ್ರಮಿಸಿದ ಅಧ್ಯಾಪಕವರ್ಗವನ್ನು ಕೆ. ಕೆ. ಎನ್. ಸಿ.ಯ ಅಧ್ಯಕ್ಷರೂ ಹಾಗೂ ಕನ್ನಡಕಲಿ ಅಕ್ಷರಕೃಷಿಯನ್ನು ಈ ವರ್ಷ ಕನ್ನಡಕೂಟದಲ್ಲಿ ನನಸಾಗಿಸಿದವರೂ ಆದ ರಮೇಶ್ ಜಾವಗಲ್‌ರವರು ಪುರಸ್ಕರಿಸಿದರು. ಅಧ್ಯಾಪಕವರ್ಗದ ಪರವಾಗಿ ಮಾತಾಡಿದ ಪದ್ಮನಾಭರಾವ್ ಮೇಲನಹಳ್ಳಿಯವರು ಈ ಯೋಜನೆಯಲ್ಲಿ ಅಧ್ಯಾಪಕರಾಗಿ ತಾವು ಎದುರಿಸಿದ ಸವಾಲುಗಳು ಹಾಗೂ ಪೋಷಕರಾಗಿ ತಾವು ಕಂಡ ಸಾರ್ಥಕತೆಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. 'ಕನ್ನಡಕಲಿ'ತ ಮಕ್ಕಳ ಉಚ್ಚಾರದಲ್ಲಿ 'ಲ'ಕಾರ ಮತ್ತು 'ಳ'ಕಾರಗಳ ಸ್ಪಷ್ಟತೆಯಂತಹ ಸೂಕ್ಷ್ಮವಾದ ಸುಧಾರಣೆಗಳನ್ನು ಗಮನಿಸಿದರು. ಪೋಷಕರು ಮನೆಯಲ್ಲಿ ಕನ್ನಡದ ಬಳಕೆಯನ್ನು ಬಿಡದೆ

ಮುಂದುವರಿಸಬೇಕೆಂದು ಕೇಳಿಕೊಂಡರು. "ನಿಮ್ಮ ಮಕ್ಕಳಿಗೆ ನಿದ್ದೆಯ ಸಮಯದ ಕತೆಗಳನ್ನು ಕನ್ನಡದಲ್ಲೇ ಹೇಳಿ." ಎಂದು ಸಲಹೆಮಾಡಿದರು.

ನಂತರ ಕನ್ನಡಕಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಕ್ಕಳಿಗೆಲ್ಲಾ ಪದವಿಪತ್ರಗಳನ್ನೂ, ಕಲಿಕೆಯಲ್ಲಿ ಕೊಂಚ ಮುಂದುವರಿದವರಿದವರಿಗೆ ವಿಶೇಷಮನ್ನಣೆಯ ಪತ್ರಗಳನ್ನೂ ಕೆ. ಕೆ. ಎನ್. ಸಿ.ಯ ಬೋರ್ಡಿನ ಚೇರ್ಮನ್ನರಾದ ರವಿ ರವೀಂದ್ರನಾಥ್‌ರವರು ಕೊಟ್ಟರು. ಅಕ್ಷರಮಾಲೆ, ಕಾಗುಣಿತ ಮತ್ತು ಸರಳವಾದ ಪದಗಳನ್ನು ಪರಿಚಯಿಸುವ C.D.ಯೊಂದನ್ನೂ ಹಾಗೂ ಕನ್ನಡಪದಕೋಶದ C.D.ಯೊಂದನ್ನೂ ಮಕ್ಕಳಿಗೆ ಕೊಡಲಾಯ್ತು. ತರಬೇತಿಯ ವಯಸ್ಕವಿದ್ಯಾರ್ಥಿಗಳಾದ ಜೋಶ್ ಕಾರ್ಲ್ಸನ್ ಮತ್ತು ಕ್ಯಾರೆನ್ ವಾಸುದೇವ್ ಅವರುಗಳೂ ಪದವಿಪತ್ರಗಳನ್ನು ಪಡೆದರು. ಕಾರ್ಯಕ್ರಮದ ಕೊನೆಗೆ We Shall Overcome ಎಂಬ ಅಮೇರಿಕಾದ ಚಾರಿತ್ರಿಕಗೀತೆಯನ್ನು ಆಧರಿಸಿ ಅಧ್ಯಾಪಕಿ ಜ್ಯೋತಿ ಶೇಖರ್ ರಚಿಸಿ ಕಲಿಸಿದ, 'ಗುರಿಯ ಮುಟ್ಟುವೆವು' ಎಂಬ ಸಮೂಹಗೀತೆಯನ್ನು ಹಿರಿಯ ಮಕ್ಕಳು ಹಾಡಿದರು.

ಈ ವೇಳೆಗೆ ಎಲ್ಲರ ಹೊಟ್ಟೆಯೂ ಚುರ್ ಎನ್ನುತ್ತಿತ್ತೇನೋ? ಸಧ್ಯ, ಊಟದ ವ್ಯವಸ್ಥೆಯಂತೂ ಖಂಡಿತಾ ಆಗಿತ್ತು. ರಮೇಶ್ ಜಾವಗಲ್‌ರವರು "ಲೇಟಾಯ್ತು! ಸಾವಕಾಶವಾಗಿ ಊಟಮಾಡಿ." ಎಂದು ಔಪಚಾರಿಕವಾಗಿ ಹೇಳುತ್ತಾ ತಮ್ಮ ಫೇಮಸ್ ಕ್ರಿಕೆಟ್ಟಿಗನೆಂಟ ಚಿಕ್ಕಂದಿನಲ್ಲಿ ಹೇಳಿದ್ದನೆಂಬಲಾದಂತೆ "ಸಾಧಾರಣವಾಗಿ ಊಟಮಾಡಿ!" ಎಂದೂ ಹೇಳಿ ನಗಿಸಿದರು.

"ನಾವು ಕನ್ನಡ ಕಲಿಸುವೆವು
ನಾವು ಕನ್ನಡ ಉಳಿಸುವೆವು
ನಾವು ಕನ್ನಡ ಬೆಳೆಸುವೆವು
ಎಂದೆಂದೂ...
ಹೃದಯದಲಿದೆ ವಿಶ್ವಾಸ"

ಎಂದು 'ಗುರಿಯ ಮುಟ್ಟುವೆವು' ಗೀತೆಯಲ್ಲಿ ಎಲ್ಲರ ಆಶಯವನ್ನು ಪ್ರತಿಧ್ವನಿಸಿದ ಈ ಮಕ್ಕಳು "ಇಂದು ಕನ್ನಡವನ್ನು ಕಲಿಯುತ್ತಾ ಮುಂದೆ ಕನ್ನಡದ ಕಲಿಗಳಾಗಲಿ." ಎಂದು ನಾವೆಲ್ಲಾ ಹಾರೈಸಬಹುದಲ್ಲವೇ? ◈

"ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ"

ಉತ್ತರ ಕ್ಯಾಲಿಫ಼ೋರ್ನಿಯ ಕನ್ನಡಕೂಟದ ಸದಸ್ಯರೆಲ್ಲರಿಗೆ
ಶುಭಕಾಮನೆಗಳೊಂದಿಗೆ

ಸಂಧ್ಯಾ ಮತ್ತು ಶಿವಪ್ರಸಾದ್



# ಐ. ಸಿ. ಸಿ.ಯಲ್ಲಿ ಕರ್ನಾಟಕ ದಿನ

**ಅಶೋಕ ಹಂದಿಗೋಳ**

ಫ್ರೀಮಾಂಟ್, ಕ್ಯಾಲಿಫೋರ್ನಿಯ

ಜೂನ್ ೨೪ರಂದು ಮಿಲ್ಪೀಟಸ್ ನಲ್ಲಿರುವ ಇಂಡಿಯ ಕಮ್ಯೂನಿಟಿ ಸೆಂಟರ್‌ನಲ್ಲಿ ಸಡಗರವೋ ಸಡಗರ! ಎಲ್ಲಿ ನೋಡಿದರಲ್ಲಿ, ಕಣ್ಣಿಗೆ ಕನ್ನಡ-ಬಾವುಟದ ಅರಿಷಿಣ-ಕುಂಕುಮದ ಹಬ್ಬ. ಎಲ್ಲಿ ಕೇಳಿದರಲ್ಲಿ, ಕಿವಿಗೆ ಸವಿಗನ್ನಡದ ಇಂಪು. ಮೂಗಿಗಂತೋ ಬಿಸಿಬೇಳೆ ಬಾತ್ ಮತ್ತು ಮಸಾಲೆ ದೋಸೆಯ ಸುವಾಸನೆಯ ಆನಂದ. ಇದೆಲ್ಲ ಯಾಕೆ ಎಂದಿರಾ? ಐ ಸಿ ಸಿ ಸಂಸ್ಥೆಯವರು, ಭಾರತದ ವಿವಿಧ ಪ್ರಾಂತ್ಯ ಮತ್ತು ರಾಜ್ಯಗಳನ್ನು, ಪರರಾಜ್ಯ ಮತ್ತು ದೇಶದವರಿಗೆ ಪರಿಚಯಿಸಲು, ವರ್ಷದ ಕೆಲವು ದಿನಗಳನ್ನು, ಆಯಾ ರಾಜ್ಯಗಳ ದಿನ ಎಂದು ಆಚರಿಸುತ್ತಾರೆ. ಅದರ ಸಾಲಿನಲ್ಲಿ, ಜೂನ್ ೨೪ ಕರ್ನಾಟಕದಿನವಾಗಿತ್ತು.

ಅಂದು ಐ ಸಿ ಸಿ, ಕರ್ನಾಟಕದ ವಿವಿಧ ಪ್ರಾಂತ್ಯಗಳ ಬಣ್ಣ ಬಣ್ಣದ ವೇಷಭೂಷಣಗಳಿಂದ ಅಲಂಕೃತವಾಗಿತ್ತು. ಒಂದೆಡೆ ಮಲೆನಾಡಿನ ಯಕ್ಷಗಾನದ ಚಿತ್ರ-ವಿಚಿತ್ರ ಆಭೂಷಣಗಳ ಮತ್ತು ಚಿತ್ರಗಳ ಅಲಂಕಾರವಿದ್ದರೆ ಇನ್ನೊಂದು ಕಡೆ ಮೈಸೂರಿನ ದಸರಾ ಹಬ್ಬದ ಗೊಂಬೆಗಳ ಮೆರವಣಿಗೆ. ಸಂಗೀತ ಕಲೆಗೆ ಸಂಬಂಧಪಟ್ಟ ಹಾಗೆ ಪುರಂದರ ದಾಸರ ಭಿತ್ತಿಚಿತ್ರ, ವೀಣೆ. ಕನ್ನಡ ನಾಡಿನ ಸುಪ್ರಸಿದ್ಧ ಶ್ರೀಗಂಧದ ಸಿರಿಯನ್ನು ಮೆರೆಯುವ ಗಂಧದ ಕಲಾಕ್ರತಿಗಳು, ಭರತನಾಟ್ಯದ ಉಡುಗೆಗಳು, ಮದುವೆಯ ಸಡಗರವನ್ನು ಬಿಂಬಿಸುವ ವಧೂ-ವರರ, ವಾಲಗದ ಬೊಂಬೆಗಳು, ಮೊರದ ಬಾಗಿನ, ಮಲ್ಲಿಗೆಯ ಜಡೆ, ಹಬ್ಬಗಳ ಸಂಭ್ರಮವನ್ನು ತೋರುವ ವೇಷ-ಭೂಷಣಗಳು...ಹೀಗೆ ಒಂದೆ.. ಎರಡೇ..; ಒಂದೊಂದರಲ್ಲೂ ಕರ್ನಾಟಕದ ಸಂಸ್ಕೃತಿ ಹೊರಸೂಸುತ್ತಿತ್ತು. ಹಿನ್ನೆಲೆಯಲ್ಲಿ ತೇಲಿ ಬರುತ್ತಿದ್ದ ಕನ್ನಡ ಹಾಡುಗಳು ಮಧುರವಾಗಿದ್ದವು. ಗೋಡೆಗಳ ಮೇಲೆ ಕನ್ನಡದೇವಿಯ ನೆಚ್ಚಿನ ಭಕ್ತರಾದ ಬೇಂದ್ರೆ, ಕುವೆಂಪು ಮುಂತಾದವರ ಕವಿವರೇಣ್ಯರ ಚಿತ್ರಗಳು ರಾರಾಜಿಸುತ್ತಿದ್ದವು; ವೀಕ್ಷಕರಿಗೆ ವಿಶ್ವಮಟ್ಟದ ಕನ್ನಡ ಸಾಹಿತ್ಯದ ಪರಿಚಯಮಾಡಿಕೊಡುತ್ತಿದ್ದವು. ನಮ್ಮ ರಾಜ್ಯದ ಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳ ಸುಂದರ ಛಾಯಚಿತ್ರಗಳು ಜನರಿಗೆ, "ಮುಂದಿನ ಬಾರಿ ಭಾರತಕ್ಕೆ ಹೋದಾಗ ಖಂಡಿತ ಕರ್ನಾಟಕಕ್ಕೆ ಹೋಗಬೇಕು." ಎಂದು ಮನದಟ್ಟುಮಾಡುತ್ತಿದ್ದವು. ಕುಸುಮಾ ಅರಕಲಗೂಡ್ ಮತ್ತು ತಂಡದವರು ತುಂಬಾ ಆಸ್ಥೆಯಿಂದ ಕಲಾತ್ಮಕವಾಗಿ ಸುಂದರ ಲೋಕವನ್ನೆ ಸೃಷ್ಟಿಸಿದ್ದರು.

ಬೆಳಗ್ಗೆ ಹತ್ತುಗಂಟೆಗೆ ಮಕ್ಕಳು ಸಡಗರದಲ್ಲಿ ಸೇರಿ ಚಿತ್ರಕಲಾಸ್ಪರ್ಧೆಯಲ್ಲಿ ಭಾಗವಹಿಸಿದರು. ಎಳೆಯರು ತಮಗೆ ಪ್ರಿಯವಾದ ಪ್ರಾಣಿ ಹಾಗು 'ಹಳ್ಳಿಯ ದೃಶ್ಯ'ಗಳನ್ನು ಬಣ್ಣಬಣ್ಣದ ಚಿತ್ತಾರಗಳಲ್ಲಿ ಮೂಡಿಸುವ ಪ್ರಯತ್ನ ಎಲ್ಲರ ಮನ ಸೆಳೆದಿತ್ತು. ನಂತರ ಅಡಿಗೆ ಸ್ಪರ್ಧೆ. ಹಲವಾರು ಕನ್ನಡತಿಯರು ತಮ್ಮ ನಳಪಾಕ ಚಾತುರ್ಯದಿಂದ ಹೋಳಿಗೆ ಹಾಗು ಬಿಸಿಬೇಳೆಭಾತ್ ಗಳನ್ನು ತಯಾರಿಸಿ ತಂದಿದ್ದಲ್ಲದೇ ಅವುಗಳನ್ನು ಕಲಾತ್ಮಕವಾಗಿ ಇತರ ಸಹಭಕ್ಷ್ಯಗಳೊಂದಿಗೆ ಅಲಂಕಾರದಿಂದ ಪ್ರದರ್ಶಿಸಿದ್ದರು. ಅಪರಾಹ್ನ ಆಗುತ್ತಿದ್ದಂತೆಯೆ ಬಿಸಿಬಿಸಿ ಮಸಾಲೆದೋಸೆಗಳ ಘಮಘಮ ಎಲ್ಲೆಡೆ ಹರಡಿ ಎಲ್ಲರ ಹಸಿವನ್ನು ದ್ವಿಗುಣಗೊಳಿಸಿತ್ತು. ಈ 'ದೋಸೆಕ್ಯಾಂಪ್'ನ ಜನಪ್ರಿಯತೆ ಎಷ್ಟಿತ್ತು ಅಂದರೆ ಉದ್ದನೆಯ ಸರತಿ ಇನ್ನೂ ಬೆಳೆಯುತ್ತಲೇ ಇತ್ತು. ಹೀಗೆ ಹನುಮಂತನ ಬಾಲದ ಹಾಗೆ ಬೆಳೆದ ಕ್ಯೂ ಅದರ ಜೊತೆ ಜೋರಾದ ಹಸಿವು ಎರಡು ಸೇರಿ, ಕಾಯುತ್ತಿದ್ದ ಜನಕ್ಕೆ ಕಾವೇರಿಸಿದ್ದರಲ್ಲಿ ಆಶ್ಚರ್ಯವೇನು ಇರಲಿಲ್ಲ. ಆದರೂ ಹಾಗಾಗದಿದ್ದರೆ ಒಳಿತಾಗಿತ್ತು ಅನ್ನಿಸಿತು.

ಭೋಜನದ ನಂತರ ದಿನದ ಸಾಂಸ್ಕೃತಿಕ ಕಾರ್ಯಕ್ರಮಗಳು, ಕನ್ನಡಕೂಟದ ಅಧ್ಯಕ್ಷರಾದ ನರೇನ್ ಕುನ್ಹೋಡಿಯವರ ಆತ್ಮೀಯ ಭಾಷಣದೊಂದಿಗೆ ಪ್ರಾರಂಭವಾದವು. ನೆರೆದವರಿಗೆಲ್ಲ ಅರ್ಥವಾಗುವಂತೆ ನರೇನ್ ಅವರು ಆಂಗ್ಲಭಾಷೆಯಲ್ಲಿ ಕರ್ನಾಟಕದರ್ಶನ ಮಾಡಿಸಿದರು. ನಮ್ಮ ನಾಡಿನ ಇತಿಹಾಸ, ಸಾಹಿತ್ಯ, ಕಲೆ, ಶಿಲ್ಪ, ಹೀಗೆ ಹಲವಾರು ಸಾಂಸ್ಕೃತಿಕ ವಿಷಯಗಳ ಜೊತೆ ವಾಣಿಜ್ಯ, ಗಣಕ ಮತ್ತು ಮಾಹಿತಿ ಉದ್ಯಮದ ಬೆಳವಣಿಗೆ, ಬೆಂಗಳೂರಿನ ಉಜ್ವಲ ಭವಿಷ್ಯ ಮುಂತಾದ ಆರ್ಥಿಕ ವಿಷಯಗಳ ಪರಿಚಯವನ್ನೂ ಮಾಡಿಕೊಟ್ಟರು. ಎಲ್ಲರಿಗೂ ನಮ್ಮ ರಾಜ್ಯಕ್ಕೆ ಬಂದು "ಎಂಜಾಯ್" ಮಾಡಲು ಆಹ್ವಾನವಿತ್ತರು.

ಅದ್ಭುತ ಯಕ್ಷಗಾನದೊಂದಿಗೆ ಗಿರೀಶ ಹೆಗಡೆಯವರು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ನಾಂದಿ ಮಾಡಿದರು. ಅವರ ಚಿತ್ತಾಕರ್ಷಕ ವೇಷ, ಮನೋಹರವಾದ ಲಯಬದ್ಧ ಕುಣಿತ ಕನ್ನಡ ಬರದವರ ಮನವನ್ನೂ ಎಷ್ಟು ಕುಣಿಸಿತು ಅಂದರೆ

ಸಭಿಕರ ಒತ್ತಾಯದಿಂದ, ಅವರು ಮತ್ತೊಮ್ಮೆ ಕುಣಿಯಬೇಕಾಯಿತು! ತದನಂತರ ಹಲವಾರು ಸಂಗೀತದ ಕಾರ್ಯಕ್ರಮಗಳು ನಡೆದವು. ಚಿಕ್ಕ ಮಕ್ಕಳು ಸುಶ್ರಾವ್ಯವಾಗಿ ತಮ್ಮ ತಾಯಂದಿರನ್ನು 'ಚಂದಿರನೇತಕೆ ಓಡುವನಮ್ಮ?' ಅಂತ ಕೇಳಿದರೆ, ದೊಡ್ಡವರು, ಕರ್ನಾಟಕ ಸಂಗೀತದಿಂದ ಜನರ ಮನವನ್ನು ತಣಿಸಿದರು. ನಂತರದಲ್ಲಿ ನಡೆದ ಮಕ್ಕಳ 'ಫ್ಯಾನ್ಸಿ ಡ್ರೆಸ್' ಸ್ಪರ್ಧೆ ಮನಮೋಹಕವಾಗಿತ್ತು. 'ಚುಕುಬುಕು ರೈಲು' ಎಂಬ ಜನಪ್ರಿಯ ಗೀತೆಗೆ ಪುಟ್ಟ ಬಾಲೆಯೊಬ್ಬಳು ನರ್ತಿಸಿದಾಗ ಚಪ್ಪಾಳೆ ಜೋರಾಗಿತ್ತು. ಆಮೇಲೆ ಬಂದದ್ದು, 'ಒಂದು ನಿಮಿಷದ ಹರಟೆ'. ಸ್ಪರ್ಧಿಗಳಿಗೆಲ್ಲ ಒಂದಲ್ಲ ಒಂದು ಆಸಕ್ತಿಕರ ವಿಷಯದ ಮೇಲೆ ಅಚ್ಚಕನ್ನಡದಲ್ಲಿ ಮಾತಾಡಲು ಒಂದು ನಿಮಿಷದ ಅವಕಾಶವಿತ್ತು. ಯಾರು ತಪ್ಪು ಮಾಡದೆ ನಿರರ್ಗಳವಾಗಿ ಹೆಚ್ಚು ಮಾತಾಡಿದರೋ, ಅವರು ಗೆದ್ದಂತೆ. ಪಾಪ್‌ಕಾರ್ನ್ ಹಾಗೆ ಪಟಪಟ ಅಂತ ಮಾತಾಡಿ ಜನರನ್ನು ಕೆಲವರು ಅಚ್ಚರಿಗೊಳಿಸಿದರೆ, ಇನ್ನು ಕೆಲವರು ತಮ್ಮ 'ಜೋಕ್‌ಫಾಲ್ಸ್'ಗಳಿಂದ ನಕ್ಕುನಗಿಸಿದರು. ಒಟ್ಟನಲ್ಲಿ ನಿಜಕ್ಕೂ ಖುಷಿ ಕೊಟ್ಟ ಹರಟೆ ಇದು. ಕೊನೆಯಲ್ಲಿ ಕನ್ನಡ ಕಲಿ ವಿದ್ಯಾರ್ಥಿಗಳಿಂದ ವಿವಿಧ ಕಾರ್ಯಕ್ರಮಗಳು. ಕನ್ನಡ ಕಲಿಯುತ್ತ, ನಿಜಕ್ಕೂ 'ಕನ್ನಡಕಲಿ'ಗಳಾಗುತ್ತಿರುವ ಈ ಪುಟಾಣಿಗಳು ತಮ್ಮ ಸುಮಧುರ ಕನ್ನಡ ಗಾಯನದೊಂದಿಗೆ ಸಭಿಕರ ಮನಸ್ಸನ್ನು ಸೂರೆಗೊಂಡರು.

ಈ ಮಧ್ಯದಲ್ಲಿ ಕೆಲವು ಕಾರ್ಯಕ್ರಮಗಳಾದ್ರೂ ಕನ್ನಡ ಮತ್ತು ಆಂಗ್ಲ ಭಾಷೆ ಎರಡರಲ್ಲೂ ಇದ್ದಿದ್ದರೆ ಹೆಚ್ಚು ಜನರಿಗೆ ಅರ್ಥವೂ ಆಗುತ್ತಿತ್ತು ಹಾಗೆ ಮನೋರಂಜಕವೂ ಆಗುತ್ತಿತ್ತು ಅಂತ ಅನ್ನಿಸಿದ್ದು ಸಹಜವೇ ಆದರೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರ ಮನಗಳನ್ನು ಮುದಗೊಳಿಸಿದ್ದವು. ಒಟ್ಟಿನಲ್ಲಿ ಕರ್ನಾಟಕ ದಿನ ಶ್ರೀಮಂತವಾದ ಕನ್ನಡ ಸಂಸ್ಕೃತಿಯ ಒಂದು ಪಕ್ಷಿನೋಟವನ್ನು ನೀಡುವಲ್ಲಿ ಬಲು ಯಶಸ್ವಿಯಾಯಿತು. ◈

## ಧನ್ಯವಾದಗಳು

ಈ ವರ್ಷದಲ್ಲಿ ಕನ್ನಡಕೂಟದ ವಿವಿಧ ಕಾರ್ಯಕ್ರಮಗಳು ಬಹಳ ಯಶಸ್ವಿಯಾಗಿ ನಡೆದವು. ಈ ಸಮಯದಲ್ಲಿ ಇದಕ್ಕಾಗಿ ಪರಿಶ್ರಮಿಸಿದ ಹಲವರನ್ನು ನೆನೆಯುವುದು ಉಚಿತವೆಂದು ಭಾವಿಸುತ್ತೇನೆ.

- ಕಾರ್ಯಕ್ರಮಗಳಲ್ಲಿ ತಾವಾಗಿ ಮುಂದೆ ಬಂದು, ವಿವಿಧ ರೀತಿಯಲ್ಲಿ ಸಹಾಯ ಹಸ್ತ ನೀಡಿದ ಕೂಟದ ಸದಸ್ಯ ಸ್ವಯಂಸೇವಕರಿಗೆ
- ಎಲ್ಲ ಮನರಂಜನಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಕಲಾವಿದರಿಗೆ
- ಕಾರ್ಯಕ್ರಮ ನಿರ್ದೇಶಕರು, ನಿರ್ವಾಹಕರು ಮತ್ತು ನಿರೂಪಕರಿಗೆ
- ಕಾರ್ಯಕ್ರಮಗಳ ಪ್ರಾಯೋಜಕರಿಗೆ
- ಸ್ವರ್ಣಸೇತು–೨೦೦೬ ಯುಗಾದಿ ಕಥಾಸ್ಪರ್ಧೆಯ ತೀರ್ಪುಗಾರರಾಗಿದ್ದ ಡಾ.ಗುರುಪ್ರಸಾದ್ ಕಾಗಿನೆಲೆ ತ್ರಿವೇಣಿ ಶ್ರೀನಿವಾಸರಾವ್, ಮತ್ತು ಸಂಧ್ಯಾ ರವೀಂದ್ರನಾಥ್ ಇವರಿಗೆ
- ಮಕ್ಕಳ ರಂಗೋಲಿ ಸ್ಪರ್ಧೆಯ ತೀರ್ಪುಗಾರರಾಗಿದ್ದ ಉಷಾ ಬೆಟ್ಟದಪುರ ಮತ್ತು ಲತಾ ಗಣಪತಿ ಅವರಿಗೆ
- ಮಕ್ಕಳ ಚಿತ್ರಕಲಾಸ್ಪರ್ಧೆಯ ತೀರ್ಪುಗಾರರಾಗಿದ್ದ ಕಲಾ ಘಾಟಿ ಮತ್ತು ವೀಣಾ ಶಾಸ್ತ್ರಿ ಅವರಿಗೆ
- ಮಕ್ಕಳ ಪ್ರಬಂಧ ಸ್ಪರ್ಧೆಯ ತೀರ್ಪುಗಾರರಾಗಿದ್ದ ಡಾ। ರವಿ ಗೋಪಾಲರಾವ್, ಮಂಗಳಾ ಕುಮಾರ್ ಮತ್ತು ಶಕುಂತಲಾ ಮೂರ್ತಿ ಅವರಿಗೆ
- ಸ್ವರ್ಣಸೇತುವಿಗೆ ರೇಖಾಚಿತ್ರಗಳನ್ನು ರಚಿಸಿದವರಿಗೆ ಹಾಗೂ ತಿದ್ದುಪಡಿ ಮತ್ತು ಬೆರಳಚ್ಚಿನಲ್ಲಿ ಸಹಕಾರ ನೀಡಿದವರಿಗೆ
- ಕನ್ನಡಕೂಟದ ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ಅವರ ಕುಟುಂಬವರ್ಗದವರಿಗೆ

ಮತ್ತು

- ವಿವಿದ ಕಾರ್ಯಕ್ರಮಗಳಲ್ಲಿ ಸಹಾಯ ಮಾಡಿದ ಕೂಟದ ಕಿರಿಯ ಸದಸ್ಯರಾದ ಸಹನಾ ಅರಕಲಗೂಡು, ಪರಿಣಿತ ದೇಶಪಾಂಡೆ, ಸಂಕೀರ್ತಿ ಹನಿಯೂರ್ , ದೀಕ್ಷ ವೆಂಕಟೇಶ್ ಮತ್ತು ಸುಚರಿತ ಎಲಿಮೇಲಿ ಇವರಿಗೆ

**ಕನ್ನಡಕೂಟದ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು**



# ಧರ್ಮಾಧಿಕಾರಿಗಳ ಭೇಟಿ

**ರಾಮಪ್ರಸಾದ್.ಕೆ.ವಿ.**

ಮಿಲ್ಪೀಟಸ್, ಕ್ಯಾಲಿಫೋರ್ನಿಯ

ನಾಲ್ಕನೆಯ ವಿಶ್ವ ಕನ್ನಡ ಸಮ್ಮೇಳನಕ್ಕಾಗಿ ಬಾಲ್ಟಿಮೋರ್‌ಗೆ ಆಗಮಿಸಿದ್ದ ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ವೀರೇಂದ್ರ ಹೆಗ್ಗಡೆ ಅವರು, ಸಮ್ಮೇಳನದ ನಂತರ ಅಮೆರಿಕೆಯ ಇತರ ಹಲವು ನಗರಗಳಿಗೂ ಭೇಟಿ ಕೊಡುತ್ತಿದ್ದಾರೆ. ಸ್ಯಾನ್ ಫ್ರಾನ್ಸಿಸ್ಕೋ ಕೊಲ್ಲಿ ಪ್ರದೇಶದಲ್ಲಿ ಮಿಲ್ಪೀಟಸ್‌ನ ಜೈನ ದೇಗುಲಕ್ಕೆ ಆಗಮಿಸಿದ್ದ ಅವರು ಇಲ್ಲಿಯ ಭಾರತೀಯ ಸಮುದಾಯವನ್ನುದ್ದೇಶಿಸಿ ಮಾತನಾಡಿದರು. ಈ ಕಾರ್ಯಕ್ರಮಕ್ಕೆ ಸುಮಾರು ನಾನೂರಕ್ಕೂ ಹೆಚ್ಚು ಸಭಿಕರು ಬಂದು ಹೆಗ್ಗಡೆಯವರ ವಿಚಾರಧಾರೆಯನ್ನು ಕೇಳುವ ಸುಯೋಗ ಪಡೆದರು.

ಸೆಪ್ಟೆಂಬರ್ ೧೦ ರಂದು ಭಾನುವಾರ ಸಂಜೆ ನಡೆದ ಈ ಕಾರ್ಯಕ್ರಮದ ಮೊದಲ ಭಾಗದಲ್ಲಿ ನೆರೆದ ಸಭಿಕರಿಗೆಲ್ಲ ಅನುಕೂಲವಾಗುವಂತೆ ಇಂಗ್ಲಿಷ್ ಭಾಷೆಯಲ್ಲಿ ಮಾತನಾಡಿದ ಶ್ರೀ ಹೆಗ್ಗಡೆಯವರು ಎರಡನೆಯ ಭಾಗದಲ್ಲಿ, ಕನ್ನಡಕೂಟದ ಸದಸ್ಯರಿಗೆಂದೇ ಕನ್ನಡದಲ್ಲೇ ಮಾತನಾಡಿದರು. ಇದರ ನಂತರ ನಡೆದ ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ, ಕನ್ನಡ ಕೂಟದ ಸದಸ್ಯರು ಕೇಳಿದ ಹಲವಾರು ಪ್ರಶ್ನೆಗಳಿಗೆ ಉತ್ತರಿಸಿದ ಹೆಗ್ಗಡೆಯವರು ತಮ್ಮ ವಿಚಾರಧಾರೆಯನ್ನು ಸಭಿಕರಿಗೆ ವಿಷದವಾಗಿ ತಿಳಿಯಪಡಿಸಿದರು. ಶ್ರೀಕ್ಷೇತ್ರದ ವತಿಯಿಂದ ನಡೆಸುತ್ತಿರುವ ಗ್ರಾಮೀಣ ಅಭಿವೃದ್ಧಿ ಯೋಜನೆ, ಬಡತನ ನಿರ್ಮೂಲನ, ದುಶ್ಚಟಗಳ ನಿರ್ಮೂಲನ, ಮಹಿಳಾ ವಿಕಾಸ, ಸ್ವ-ಉದ್ಯೋಗ ಕಾರ್ಯಕ್ರಮಗಳು, ದೇವಸ್ಥಾನ ಮತ್ತು ಹಳೆಯ ಸ್ಮಾರಕಗಳ ಪುನರುದ್ಧಾರ, ಮೊದಲಾದ ಹಲವಾರು ಯೋಜನೆಗಳನ್ನು ಹೆಗ್ಗಡೆಯವರು ಪರಿಚಯಮಾಡಿಕೊಟ್ಟರು. ನಾಡಿನ ಸಾಮಾಜಿಕ-ಶೈಕ್ಷಣಿಕ-ಧಾರ್ಮಿಕ- ಆರ್ಥಿಕ ಬೆಳವಣಿಗೆಗೆ ಬೇಕಾಗಿರುವ ಈ ಕಾರ್ಯಕ್ರಮಗಳು ಹೇಗೆ ಒಂದಕ್ಕೊಂದಕ್ಕೆ ಪೂರಕವೆಂಬುದನ್ನು ಅವರು ಮನದಟ್ಟುಮಾಡಿಕೊಟ್ಟರು. ನಮ್ಮ ಸಂಸ್ಕೃತಿಯನ್ನು, ಭಾಷೆಯನ್ನು ಉಳಿಸಿ ಬೆಳೆಸಿಕೊಳ್ಳುವುದರ ಮಹತ್ವವನ್ನು ಹೆಗ್ಗಡೆಯವರು ವಿವರಿಸಿದರು. ಸಂಸ್ಕೃತಿಯ ಒಂದು ಪ್ರಮುಖ ಅಂಗ ಧರ್ಮ. ಹಾಗಾಗಿ, ನಾವೆಲ್ಲರೂ ತಮ್ಮ ಬಿಡುವಿಲ್ಲದ ದೈನಂದಿನ ಕಾರ್ಯಚಟುವಟಿಕೆಗಳ ನಡುವೆಯೂ, ಕೊಂಚ ಸಮಯ ಮಾಡಿಕೊಂಡು ನಮ್ಮ ಸಂಸ್ಕೃತಿ, ಧರ್ಮಗಳ ಬಗ್ಗೆ ಚಿಂತಿಸುವುದರ ಅಗತ್ಯವನ್ನು ಹೆಗ್ಗಡೆ ಅವರು ಅರಿವು ಮಾಡಿಕೊಟ್ಟರು. ಮುಂದಿನ ಪೀಳಿಗೆಗೆ ನಮ್ಮ ಬೇರುಗಳನ್ನು ಕಾಯ್ದುಕೊಂಡು ಹೋಗುವುದು ಎಷ್ಟು ಅಗತ್ಯ ಎಂಬುದನ್ನು ಅವರು ವಿವರಿಸಿದರು. ಮನುಷ್ಯನು ಏಳಿಗೆಗೆ ಬರಬೇಕಾದರೆ ಧರ್ಮವನ್ನು ಬೇರೆ ಇಟ್ಟು ನೋಡುವ ಮನೋಭಾವ ಹೋಗಬೇಕು. ಧರ್ಮ ಜೀವನದಲ್ಲಿ ಹಾಸು-ಹೊಕ್ಕಾಗಿದ್ದಾಗಲೇ, ಅದು ಜೀವನದ ವಿವಿಧ ಅಂಗಗಳೊಡನೆ ಸಾಮರಸ್ಯ ಉಂಟುಮಾಡಿದ್ದಾಗಲೇ ಪ್ರಗತಿ ಸಾಧ್ಯ ಎಂದು ಅವರು ನುಡಿದರು. ಕರ್ನಾಟಕದಲ್ಲಿ ನಡೆಯುತ್ತಿರುವ ಮೂಲಭೂತ ಸೌಕರ್ಯ ಒದಗಿಸುವ ಅಭಿವೃದ್ಧಿ ಯೋಜನೆಗಳು, ಐಟಿ ಕ್ರಾಂತಿಗಳ ಬಗ್ಗೆಯೂ ಮಾತಾಡಿದ ಶ್ರೀ ವೀರೇಂದ್ರ ಹೆಗ್ಗಡೆಯವರು, ಈ ಕ್ರಾಂತಿಯಲ್ಲಿ ಧರ್ಮಸ್ಥಳ, ಮತ್ತು ಇತರ ಧಾರ್ಮಿಕ ಸಂಘಟನೆಗಳು ತಾಂತ್ರಿಕ ಶೈಕ್ಷಣಿಕ ಸಂಸ್ಥೆಗಳ ಮೂಲಕ ಪ್ರಮುಖ ಪಾತ್ರವನ್ನು ವಹಿಸುತ್ತಿರುವುದನ್ನು ವಿವರಿಸಿದರು.

ಕರ್ನಾಟಕಕ್ಕೆ ಹೊಸ ಅವಕಾಶಗಳನ್ನು ತಂದುಕೊಡುವುದರಲ್ಲಿ ವಿದೇಶಿ ಕನ್ನಡಿಗರ ಪಾಲನ್ನು ಹೊಗಳಿದ ಅವರು, ಇನ್ನೂ ಹಲವು ಕ್ಷೇತ್ರಗಳಲ್ಲಿ ಹೊರದೇಶದಲ್ಲಿರುವ ಕನ್ನಡಿಗರು ತಾಯ್ನಾಡಿಗೆ ಇನ್ನೂ ಹೆಚ್ಚಿನ ಸಹಕಾರ ಕೊಡಬಹುದು ಎಂದು ನುಡಿದರು. ಎಲ್ಲರೂ ತಮ್ಮ ತಮ್ಮ ಭಾಷೆ ಸಂಸ್ಕೃತಿಗಳನ್ನು ಉಳಿಸಿಕೊಳ್ಳಬೇಕು. ಆ ನಿಟ್ಟಿನಲ್ಲಿ ಅಮೆರಿಕೆಯಲ್ಲಿರುವ ಕನ್ನಡಿಗರು ಕನ್ನಡವನ್ನು ಉಳಿಸಿಕೊಂಡಿದ್ದಾರೆ- ಇದನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಪ್ರಯತ್ನವನ್ನೂ ಮಾಡುತ್ತಿದ್ದಾರೆ. ಇಲ್ಲಿನ ಥಳುಕಿನ ಜೀವನದ ನಡುವೆಯೂ, ತಮ್ಮ ಬೇರುಗಳನ್ನು ಉಳಿಸಿಕೊಳ್ಳುತ್ತಿರುವ ಪ್ರಯತ್ನವನ್ನು ಮಾಡುವ ಇಲ್ಲಿಯ ಕನ್ನಡಿಗರಿಗೆ ಗೌರವ ಅರ್ಪಿಸಬಯಸುತ್ತೇನೆ ಎಂದ ಹೆಗ್ಗಡೆಯವರು, ಎಲ್ಲಾದರು ಇರು ಎಂತಾದರು ಇರು ಎಂದೆಂದಿಗು ನೀ ಕನ್ನಡವಾಗಿರು ಎಂಬ ಕವಿವಾಣಿಯನ್ನು ಪುನರುಚ್ಚರಿಸಿದರು. ಉತ್ತರ ಕ್ಯಾಲಿಫೋರ್ನಿಯ ಕನ್ನಡಕೂಟದ ಅಧ್ಯಕ್ಷ ನರೇನ್ ಅವರು ಕೂಟದ ಸದಸ್ಯರ ಪರವಾಗಿ ಹೆಗ್ಗಡೆಯವರಿಗೆ ಮಾಲಾರ್ಪಣೆ ಮಾಡಿ, ಶಾಲು ಹೊದೆಸಿ, ಕೃತಜ್ಞತಾ ಫಲಕಗಳನ್ನು ಕೊಟ್ಟು ಧನ್ಯವಾದಗಳನ್ನು ಸಲ್ಲಿಸಿದರು. ◈



# ಮಾಲ್‌ನಲ್ಲೊಂದು ಮಾತುಕತೆ

**ರಾಮಪ್ರಸಾದ್.ಕೆ.ವಿ.**

ಮಿಲ್ಪೀಟಸ್, ಕ್ಯಾಲಿಫೋರ್ನಿಯ

ಕಳೆದ ಭಾನುವಾರ, ಮಾಮೂಲಿ ವಾರಾಂತ್ಯದಲ್ಲಿ ಬಂದಿದ್ದ ಹುಟ್ಟುಹಬ್ಬವೊಂದಕ್ಕೆ ಉಡುಗೊರೆ ಕೊಳ್ಳಲಿಕ್ಕೆಂದು ನ್ಯೂಪಾರ್ಕ್ ಮಾಲ್‌ಗೆ ಹೋಗಲೇಬೇಕಾಯಿತು (ನನಗೆ ಅತೀ ಬೇಜಾರಿನ ಕೆಲಸಗಳಲ್ಲಿ ಮಾಲ್‌ಗೆ ಹೋಗುವುದೂ ಒಂದು). ನನ್ನ ಶ್ರೀಮತಿ ಅಂಗಡಿಯೊಳಗೆ ಖರೀದಿಗೆ ಹೋಗಿದ್ದಾಗ, ಶಾಪಿಂಗ್ ಅಲರ್ಜಿ(!) ಕಾರಣದಿಂದ ನಾನು ಹೊರಗೆ ಹಾಗೇ ಕಾಫಿ ಕುಡಿಯುತ್ತ ಪತ್ರಿಕೆ ಓದುತ್ತ ಕುಳಿತಿದ್ದೆ. ಪಕ್ಕದಲ್ಲೇ ಒಂದು ಕನ್ನಡಿಗರ ಕುಟುಂಬವೂ ಮಾತನಾಡುತ್ತಿದ್ದದ್ದು ಕೇಳಿಬಂತು. ಒಂದೂವರೆ – ಎರಡು ವರ್ಷದ ಮುದ್ದಾದ ಮಗುವೊಂದನ್ನು ಅಜ್ಜ, ಅಜ್ಜಿ ಆಡಿಸುತ್ತಿದ್ದರು. ಬಹುಶಃ ಮಗುವಿನ ಅಪ್ಪ ಅಮ್ಮ ನನ್ನಾಕೆಯಂತೆಯೇ ಅಂಗಡಿಯೊಳಗಿದ್ದಿರಬೇಕು! ಅವರ ಮಾತಿನಲ್ಲಿ ಸೆಪ್ಟೆಂಬರ್ ೧೬ರಂದು ನಡೆದ ನಮ್ಮ ಉತ್ತರ ಕ್ಯಾಲಿಫೋರ್ನಿಯಾ ಕನ್ನಡಕೂಟದ ಗಣೇಶೋತ್ಸವ ಕಾರ್ಯಕ್ರಮದ ಪ್ರಸ್ತಾಪ ಬರುತ್ತಿದ್ದುದನ್ನು ಕೇಳಿ, ನಾನು ನನ್ನ ಗಮನವನ್ನು ಸ್ವಲ್ಪ ಅತ್ತಕಡೆ ಹರಿಸಿದೆ.

ಆಕೆ: ನೆನ್ನೆ ಕಾರ್ಯಕ್ರಮದಲ್ಲಿ ಸುಮಾರು ೬-೭ ಗಂಟೆ ಸಮಯ ಕಳೆದಿದ್ದೇ ಗೊತ್ತಾಗ್ಲಿಲ್ಲ, ಅಲ್ವೇನ್ರಿ?

ಆತ: ಈ ದೇಶದಲ್ಲಿ ಎಲ್ಲದರಲ್ಲೂ ಅಚ್ಚುಕಟ್ಟು ಜಾಸ್ತಿ ಅಲ್ಲವೇ? ಕಾರ್ಯಕರ್ತರ ಶ್ರದ್ದೆಯನ್ನ ಮುಖ್ಯವಾಗಿ ಮೆಚ್ಚಬೇಕು. ಒಳ್ಳೆ ಒಪ್ಪ ಓರಣವಾಗಿತ್ತು.

ಆಕೆ: ಹೌದು ಹೌದು. ಹೊರಗಡೆ ಅಲಂಕಾರ ಕೂಡ ಎಷ್ಟು ಚೆನ್ನಾಗಿ ಮಾಡಿದ್ದರಲ್ವಾ? ಅಲಂಕರಿಸಿದ ಮಂಟಪದಲ್ಲಿ ಗಣೇಶ, ಮತ್ತೆ ಸೀರೆ ಉಡಿಸಿದ ಗೌರಿ. ಅವರ ಮುಂದೆ ಧೂಪದೀಪ ನೈವೇದ್ಯ. ಅಷ್ಟೇ ಅಲ್ಲದೆ, ಗೌರಿ ಹಬ್ಬದ ಬಾಗಿನ ಕೂಡ ಇಟ್ಟಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ಇಬ್ಬರು ಹುಡುಗಿಯರ ಹೆಸರನ್ನು ರ್‍ಯಾಫೆಲ್ ನಲ್ಲಿ ತೆಗೆದು, ಅವರಿಗೆ ಆ ಬಾಗಿನ ಕೊಟ್ಟರು! ಆಮೇಲೆ ಮಕ್ಕಳಿಗೆ ರಂಗೋಲಿ ಸ್ಪರ್ಧೆಯನ್ನು ನಡೆಸಿ, ಸ್ಪರ್ಧಿಗಳು ಬರೆದಿದ್ದ ರಂಗೋಲಿಗಳನ್ನೂ ಅಲ್ಲೇ ಸುಂದರವಾಗಿ ಜೋಡಿಸಿದ್ದರು. ನಮ್ಮ ಸಂಪ್ರದಾಯಗಳನ್ನೆಲ್ಲ ಮರೀಬಾರದು ಅಂತ ಇವರು ಇದನ್ನೆಲ್ಲ ನಡೆಸಿಕೊಂಡು ಹೋಗ್ತಿರೋದು ತುಂಬಾ ಸಂತೋಷ ಆಗತ್ತೆ.

ಆತ: ನಿಜ. ಕುಸುಮಾ ಅವರ ನೇತೃತ್ವದಲ್ಲಿ ಈ ಅಲಂಕಾರ ಎಲ್ಲಾ ಮಾಡಿದ್ರಂತೆ. ಅಲಂಕಾರ ಮಾಡಿದವರ ಹೆಸರುಗಳನ್ನ ಅಲ್ಲೇ ಬರೆದಿದ್ದರು, ನೀನು ನೋಡಲಿಲ್ಲವಾ? ಅಲ್ಲದೆ ಒಳಗೆ ರಂಗಮಂಟಪದ ಪಕ್ಕದಲ್ಲಿಯೂ ಗಣಪತಿ ಇಟ್ಟು, ಕಾರ್ಯಕ್ರಮಕ್ಕೆ ಮೊದಲು ಮಕ್ಕಳ ಕೈಲಿ ಪೂಜೆ ಕೂಡ ಮಾಡಿಸಿದರಲ್ಲ! ಅಷ್ಟೇ ಅಲ್ಲದೆ, ಆ ಶ್ರೇಯಸ್ ಅನ್ನೋ ಹುಡುಗ ಗಣಪತಿಯ ವೇಷದಲ್ಲಿ ಛತ್ರ ಚಾಮರಗಳ ಸಮೇತ ಮೆರವಣಿಗೆಯಲ್ಲಿ ಬಂದದ್ದೂ ಅಷ್ಟೇ ಸೊಗಸಾಗಿತ್ತು.

ಆಕೆ: ಇಷ್ಟೆಲ್ಲ ಅಲಂಕಾರಕ್ಕೆ ಸರಿಯಾಗೇ ಇತ್ತಲ್ಲ ಕಾರ್ಯಕ್ರಮಗಳೆಲ್ಲವೂ ಅಚ್ಚುಕಟ್ಟಾಗಿ! ಸಮಯಕ್ಕೆ ಸರಿಯಾಗಿ ಗಣಪತಿಯ ಪ್ರಾರ್ಥನೆಯಿಂದ ಕಾರ್ಯಕ್ರಮ ಶುರುವಾಯ್ತಲ್ಲ. ಅದಾದಮೇಲೆ ಚಿಕ್ಕ ಮಕ್ಕಳು ಪುರಂದರ ದಾಸರ ಕಂಡೆನಾ ಗೋವಿಂದನಾ ಅನ್ನೋ ದೇವರನಾಮಕ್ಕೆ ಅದೆಷ್ಟು ಚೆನ್ನಾಗಿ ನೃತ್ಯ ಮಾಡಿದರು! ಎಲ್ಲ ಬರೀ ೫-೬ ವರ್ಷದ ಚಿಕ್ಕ ಮಕ್ಕಳು. ಜನರೂ ಮಕ್ಕಳಿಗೆ ಭಾರಿ ಚಪ್ಪಾಳೆ ತಟ್ಟಿದ್ರು. ರೀಮಾ ಕಶ್ಯಪ್, ಇಷ್ಟು ಚಿಕ್ಕಮಕ್ಕಳಿಗೆ ಅದೆಷ್ಟು ಚೆನ್ನಾಗಿ ತರಪೇತಿ ಕೊಟ್ಟಿದ್ರಲ್ವಾ?

ಆತ: ನಿಜ. ಅದಕ್ಕೆ ಮುಖ್ಯ ಅತಿಥಿಯಾಗಿ ಬಂದಿದ್ದ ಕಾನ್ಸಲ್ ಜನರಲ್ ಪ್ರಕಾಶ್ ಅವರು ಹೇಳಲಿಲ್ಲವಾ? ಅವರು ಹತ್ತಾರು ದೇಶಗಳಲ್ಲಿದ್ದು ಬಂದಿರೋವ್ರು. ಇಲ್ಲಿನಷ್ಟು ಅಭಿಮಾನದಿಂದ ಕಾರ್ಯಕ್ರಮಗಳಿಗೆ ಬರೋ ಕನ್ನಡಿಗರನ್ನೇ ಕಂಡಿಲ್ಲ ಅಂದರಲ್ಲ ಅವರು.

ಆಕೆ: ಅಷ್ಟಲ್ಲದೇ ಪುತ್ತೂರು ನರಸಿಂಹ ನಾಯಕರು, ಶಬೋ ಕಾಲೇಜ್ ಸಭಾಂಗಣಕ್ಕೂ, ರವೀಂದ್ರ ಕಲಾಕ್ಷೇತ್ರಕ್ಕೂ ಏನೂ ವ್ಯತ್ಯಾಸವೇ ಕಾಣ್ತಿಲ್ಲ ಅಂತ ಹೇಳ್ತಿದ್ದರಾ? ನರಸಿಂಹ ನಾಯಕರ ಹಾಡಿನಲ್ಲೇನೋ ಇದೆ ನೋಡಿ. ಅವರು ಭಾಗ್ಯದ ಲಕ್ಷ್ಮೀ ಬಾರಮ್ಮ ಅಂತ ಹಾಡುತ್ತಿದ್ದರೆ, ಸಾಕ್ಷಾತ್ ಲಕ್ಷ್ಮಿಯೇ ಬಂದು ಬಿಡಬೇಕು!

ಆತ: ನಿಜ! ನಾಯಕರು ಬರಿ ಗಾಯಕರಷ್ಟೇ ಅಲ್ಲ; ಸಂದರ್ಭಕ್ಕೆ ತಕ್ಕ ಗೆಳೆತನದ ಮೇಲಿನ ಗೀತೆಯನ್ನ, ಮತ್ತೆ ಹಾಸ್ಯ ಗೀತೆಯೊಂದನ್ನ ಹಾಡಿಬಿಟ್ಟರಲ್ಲ! ಅವರು ಹಾಡೋದಕ್ಕೆ ಮೊದಲು ಅ.ರಾ. ಮಿತ್ರ ಅವರು, ಹಾಸ್ಯದ

ಹೊನಲನ್ನೆ ಹರಿಸಿದ್ದರಲ್ಲ, ಅದಕ್ಕೆ ನಾಯಕರು ಸ್ಕೂಟರ್ ಜಂಬೂಸವಾರಿ ಹಾಡನ್ನು ಹೇಳಿ, ತಾವೂ ಎಲ್ಲರನ್ನೂ ನಗಿಸಿದರು!

ಆಕೆ: ಅ.ರಾ.ಮಿತ್ರರ ಕಾರ್ಯಕ್ರಮಕ್ಕೆ ಕೊಟ್ಟ ಹೆಸರು ಸರಿಯಾಗೇ ಇತ್ತು– ಹಾಸ್ಯಲೋಕ ಅಂತ. ಇನ್ನೂ ಸ್ವಲ್ಪ ಅವ್ರು ಮಾತಾಡುತ್ತಿದ್ದರೂ ಚೆನ್ನಾಗಿರ್ತಿತ್ತು .. ನಕ್ಕು ಹೊಟ್ಟೆ ಹುಣ್ಣಾಗಿಬಿಡ್ತಿತ್ತು.

ಆತ: ನನಗೆ ಒಂದೆರಡು ಕಾರ್ಯಕ್ರಮ ನೋಡಕ್ಕೆ ಆಗಲಿಲ್ಲ – ಮಗು ಅಳ್ತಾ ಇದ್ದನಲ್ಲ ಅಂತ ಹೊರಗಡೆ ಆಡಿಸ್ತಿದ್ದೆ ಅದೇನೋ ಭಲೇ ಗಣೇಶ ಅಂತ.

ಆಕೆ: ಅದರಲ್ಲಿ ಗಣಪತಿ ಹುಟ್ಟಿದ್ದ ಕಥೆ, ಮತ್ತೆ ಶಮಂತಕಮಣಿಯ ಕಥೆ ಎಲ್ಲ ಬಂತು. ಎಲ್ಲರಿಗೂ ಗೊತ್ತಿರೋ ಕಥೆಯೇ ಆಗಿದ್ದರೂ, ಚೆನ್ನಾಗಿ ನೃತ್ಯ ರೂಪದಲ್ಲಿ ಪ್ರದರ್ಶಿಸಿದ್ದು ತುಂಬಾ ಚೆನ್ನಾಗಿತ್ತು. ಅಷ್ಟೇ ಅಲ್ಲದೆ, ಸೊಗಸಾದ ರಂಗ ಸಜ್ಜಿಕೆಯೂ ಇತ್ತು. ಕೈಲಾಸಪರ್ವತ, ಜಾಂಬವಂತನ ಗುಹೆ ಎಲ್ಲಾ ಕಣ್ಣಿಗೆ ಕಟ್ಟೋ ತರಹ ಮಾಡಿದ್ದರು. ಅದಾದ ಮೇಲೆ ಒಂದು ಕರ್ನಾಟಕ ಸಂಗೀತ ಕಾರ್ಯಕ್ರಮ ಇತ್ತು.

ಆತ: ಅಷ್ಟು ಹೊತ್ತಿಗೆ ನಾನು ಬಂದಿದ್ದೆ ಒಳಗೆ; ಭಲೇಗಣೇಶದ ನಿರ್ದೇಶಕಿ ಪುಷ್ಪಾ ಸುಬ್ಬರಾವ್ ಅವರನ್ನ ಅಭಿನಂದಿಸುತ್ತಿದ್ದರಲ್ಲಾ, ಆಗ್ಲೇ ಬಂದೆ. ನಳಿನಿ ಅವರಂತೂ ಬಹಳ ಲವಲವಿಕೆಯಿಂದ ಹಾಡಿದರು. ಅವರು ಹಾಡಕ್ಕೆ ಆಯ್ದುಕೊಂಡಿದ್ದ ರಚನೆಗಳೇ ಹಾಗಿದ್ದುವ. ಉತ್ಸಾಹ ತುಂಬಿ ತುಳುಕುತ್ತಿತ್ತು. ಪಕ್ಕವಾದ್ಯದವರೂ ಒಳ್ಳೆ ಬೆಂಬಲ ಕೊಟ್ಟರು.

ಅಷ್ಟರಲ್ಲಿ ಭಾರೀ ಶಾಪಿಂಗ್ ಚೀಲಗಳೊಂದಿಗೆ ಈ ದಂಪತಿಗಳ ಮಗಳು ಬಂದಿದ್ದು ಕಂಡೆ. ನನ್ನ ಶ್ರೀಮತಿಯ ಸುಳಿವೇ ಇರಲಿಲ್ಲ ಇನ್ನೂ! ಅಂಗಡಿಗೆ ಹೋದರೆ, ಪ್ರಪಂಚವೇ ಮರೆತುಹೋಗತ್ತೇನೋ ಅನ್ಸತ್ತೆ ಒಂದೊಂದು ಸಲ. ನನ್ನ ಪತ್ರಿಕಾ ವಾಚನ ಮುಂದುವರೆಯಿತು.

ಮಗಳು: ಏನೂ ಗಲಾಟೆ ಇಲ್ಲವಾ ಇವನದ್ದು?

ಆಕೆ: ಏನೂ ಗಲಾಟೆ ಇಲ್ಲ ಕಣೇ, ಸುಮ್ಮನೆ ದೇವರ ತರಹ ಆಟ ಆಡ್ಕೋತಿದೆ ನೋಡು. ನಾವು ನೆನ್ನೆ ನಡೆದ ಕಾರ್ಯಕ್ರಮದ ವಿಷಯ ಮಾತಾಡ್‌ತಿದ್ವಿ. ತುಂಬಾ ಜನ ಬಂದಿದ್ದರು ಕಣೇ. ಯಾವಾಗಲೂ ಇಷ್ಟು ಜನ ಬರ್ತಾರಾ? ಅಷ್ಟು ಜನಕ್ಕೂ ಒಳ್ಳೇ ಬಿಸಿಬೇಳೆ ಭಾತ್, ಒಬ್ಬಟ್ಟಿನೂಟ ಚೆನ್ನಾಗಿ ಏರ್ಪಾಡು ಮಾಡಿದ್ದರು.

ಮಗಳು: ಇಷ್ಟೂ ಬರ್ತಾರೆ, ಇನ್ನೂ ಜಾಸ್ತಿನೂ ಬರ್ತಾರೆ. ನೆನ್ನೆ ಸುಮಾರು ೯೦೦–೧೦೦೦ ಜನ ಬಂದಿದ್ರು ಅನ್ಸತ್ತೆ. ಚೆನ್ನಾಗಿತ್ತಲ್ವಾ ಕಾರ್ಯಕ್ರಮಗಳು ? ಪ್ರತಿಸಲ ಇರೋದಕ್ಕಿಂತ ಹೆಚ್ಚು ಕಾರ್ಯಕ್ರಮ ಇತ್ತು ಈಸಲ. ಕರ್ನಾಟಕದಿಂದ ಅತಿಥಿ ಕಲಾವಿದರೆಲ್ಲ ಬಂದಿದ್ದರಲ್ಲ, ಅದರಲ್ಲಂತೂ ಆ ಯಕ್ಷಗಾನ ಮಾಡಿದ್ದರಲ್ಲಾ, ಅದಂತೂ ಮರೆಯಕ್ಕೇ ಆಗ್ತಿಲ್ಲ. ಇನ್ನೂ ಸ್ವಲ್ಪ ಹೊತ್ತು ಇರಬಾರದಾಗಿತ್ತಾ ಅದು ಅನ್ನಿಸ್ತು.

ಆತ: ಅವರು ತುಂಬಾ ಪ್ರಸಿದ್ಧ ಕಲಾವಿದರಮ್ಮ! ಚಿಟ್ಟಾಣಿ ರಾಮಚಂದ್ರ ಹೆಗಡೆ ಅಂದರೆ, ಕರಾವಳಿ ಕಡೇಲೆಲ್ಲ ಮನೆ ಮಾತು ಅವರು. ನೆನ್ನೆ ಅವರದು ಕಂಸನ ಪಾತ್ರ ಅಭಿನಯ ಅನ್ನೋ ಹಾಗೇ ಇರಲಿಲ್ಲ; ಅವರೇ ಕಂಸ ಆಗಿಹೋಗಿದ್ದರು.

ಆಕೆ: ಆಮೇಲೆ, ಆ ಭಾವಸಂಗಮ ಕಾರ್ಯಕ್ರಮವೂ ಚೆನ್ನಾಗಿತ್ತು ಕಣೇ. ಅದ್ರಲ್ಲೂ, ಅವರು ಹಾಡಿದ ಹಾಡು, ಉಡುಗಣವೇಷ್ಟಿತ ಅನ್ನೋದು, ನೀನು ಚಿಕ್ಕ ಹುಡುಗಿ ಆಗಿದ್ದಾಗ ರೇಡಿಯೋಲಿ ಬರೋದನ್ನ ಕೇಳಿ ನೀನು ಮುದ್ದು ಮುದ್ದಾಗಿ ಹಾಡ್ತಾ ಇದ್ದೆ– ಇನ್ನೂ ನೆನ್ನೆ ಮೊನ್ನೆ ಅನ್ನೋಹಾಗಿದೆ. ಎಚ್.ಆರ್.ಲೀಲಾವತಿ ಹಾಡ್ತಿದ್ದರು ಅದನ್ನ.

ಆತ: ನೆನ್ನೆ ಹಾಡಿದವರು ಲೀಲಾವತಿಯವರ ಶಿಷ್ಯೆ ರೋಹಿಣಿ ಅಂತ! ಹಾಗಾಗಿ ನಿನಗೆ ಅವರ ನೆನಪು ಬಂದಿದ್ದೇನೂ ಆಶ್ಚರ್ಯ ಇಲ್ಲ ಬಿಡು. ಬಹಳ ಸೊಗಸಾಗಿ ಹಾಡಿದರು ನೋಡು ರೋಹಿಣಿ.

ಮಗಳು: ನನಗೆ ಶುಭಾ ಶ್ರೀನಾಥ್ ಮಾಡಿಸಿದ ಅದಲು–ಬದಲು ನಾಟಕ ಇಷ್ಟವಾಯ್ತು – ಬೆಂಗಳೂರಿಗೂ ಬೇ ಏರಿಯಾಗೂ ಹೋಲಿಕೆ ವ್ಯತ್ಯಾಸಗಳು ತೋರಿಸಿದ್ದು ಒಳ್ಳೇ... ತಮಾಷಿಯಾಗಿತ್ತು! ಸ್ಟೇಜ್ ಸೆಟ್ಟಿಂಗ್ ಕೂಡಾ ಅಷ್ಟೇ ಚೆನ್ನಾಗಿತ್ತು ಆಮೇಲೆ, ಅಪ್ಪ, ಕೊನೆಯಲ್ಲಿ ಮಾಡಿದ್ರಲ್ಲ, ಮನೋ ರಂಜನೆ ಅಂತ, ನಿಮಗೆ ಇಷ್ಟವಾಯ್ತೋ ಇಲ್ವೋ?

ಆತ: ಚೆನ್ನಾಗಿತ್ತಮ್ಮ.. ನಾನು ಹೆಚ್ಚು ಹೊಸಹೊಸ ಚಿತ್ರಗೀತೆ ಕೇಳಿಲ್ಲ. ಹಾಗಾಗಿ ನನಗೆ ಆ ಹಾಡುಗಳನ್ನ ಹೆಚ್ಚು ಕೇಳಿ ಗೊತ್ತಿಲ್ಲ; ಆದ್ರೆ, ಹಾಡಿದವರು ಬಹಳ ಚೆನ್ನಾಗಿ ಹಾಡಿದ್ದರು ಅಂತ ಖಂಡಿತವಾಗಿ ಹೇಳ್ತೀನಿ.

ಆಕೆ: ಅದಕ್ಕೆ ನೃತ್ಯ ಕೂಡ ತುಂಬಾ ಚೆನ್ನಾಗಿ ಸಂಯೋಜಿಸಿದ್ದರಲ್ಲ? ನೋಡೋವ್ರಿಗೂ, ಹಾಡಿಗೆ ತಕ್ಕ ತಾಳ ಹಾಕ್ಬೇಕು ಅನ್ನೋ ಹಾಗೆ ಬಹಳ ಚುರುಕಾಗಿ ಮಾಡಿದ್ದರು. ಕಾರ್ಯಕ್ರಮ ನಿರೂಪಣೆ ಕೂಡ ಸೊಗಸಾಗಿತ್ತು.

ಮಗಳು: ಈ ಕಾರ್ಯಕ್ರಮದಲ್ಲಿ ಹಾಡಿದ್ದು ಸೋಮಶೇಖರ್ ಮತ್ತೆ ವೃಂದದವರು. ನೃತ್ಯಸಂಯೋಜನೆ ಮಾಡಿದ್ದವರು ನನಗೆ ಚೆನ್ನಾಗಿ ಪರಿಚಯ. ಅರ್ಚನಾ ಶೇಖರ್ ಅಂತ. ಈ ಮನೋ ರಂಜನೆಯ ವಿಶೇಷ ಏನು ಅಂತ ಗೊತ್ತಾಯ್ತಾ? ಅದರಲ್ಲಿ ಹಾಡಿದ್ದೆಲ್ಲ ಮನೋ ಮೂರ್ತಿ ಅವರು ನಿರ್ದೇಶನ ಮಾಡಿರೋ ಹಾಡುಗಳು. ಅಷ್ಟೇ ಅಲ್ಲದೆ, ಮನೋ ಮೂರ್ತಿ ಅವರು ಕೂಡ ನಮ್ಮ ಕನ್ನಡ ಕೂಟದ ಸದಸ್ಯರೇ! ಅಮೃತಧಾರೆ ಚಿತ್ರದ ಹುಡುಗ ಹುಡುಗ ಅನ್ನೋ ಹಾಡು ಹಾಡಿದ್ರಲ್ಲ ನೆನ್ನೆ, ಅದಕ್ಕೆ ಈ ವರ್ಷದ ಪ್ರಶಸ್ತಿ ಬಂದಿದೆ. ಇವತ್ತು ಇಂಟರ್‌ನೆಟ್‌ನಲ್ಲಿ ನೋಡಿದೆ!

ಆಕೆ: ಹೌದೇನೇ? ನನಗೆ ಗೊತ್ತಿರಲಿಲ್ಲ ಆ ವಿಷಯ. ಅಂತೂ ಬಹಳ ಘಟಾನುಘಟಿಗಳೇ ಇದ್ದಾರೆ ಇಲ್ಲಿ.

ಮಗಳು: ಹೌದು ಮತ್ತೆ! ನೋಡಲಿಲ್ಲ್ವ, ವಿಕ್ರಾಂತ ಕರ್ನಾಟಕ ವಾರಪತ್ರಿಕೆ ಶುರು ಮಾಡಿರೋ ರವಿ ರೆಡ್ಡಿ ಮತ್ತೆ, ಕನ್ನಡಕೂಟಕ್ಕೆ ಬಹಳ ವರ್ಷಗಳ ಸೇವೆ ಮಾಡಿರೋ ರವೀಂದ್ರನಾಥ್ ಅವರಿಗೆ ಕೂಟದ ಪ್ರೆಸಿಡೆಂಟ್ ನರೇನ್ ಸನ್ಮಾನ ಮಾಡಿದ್ರಲ್ಲ?

ಆತ: ಒಟ್ನಲ್ಲಿ, ನಿಮಗೆ ಊರಿಂದ ದೂರ ಇದ್ದೀವಿ ಅನ್ನಿಸ್ದೇ ಇರೋತರಹ, ತುಂಬಾ ಸಾಂಸ್ಕೃತಿಕ ಕಾರ್ಯಕ್ರಮಗಳಿರತ್ವೆ. ಬಹುಮುಖ ಪ್ರತಿಭೆಯ ಸದಸ್ಯರೂ ಇದ್ದಾರೆ ನಿಮ್ಮ ಕೂಟದಲ್ಲಿ. ಕಾರ್ಯಕ್ರಮ ನಿರೂಪಣೆಗೇ ಒಂದು ತಂಡ ಇಟ್ಟುಕೊಂಡು, ಎಷ್ಟು ಚೆನ್ನಾಗಿ ನಿರ್ವಹಿಸಿದರು ನೋಡು ಕಾರ್ಯಕ್ರಮವನ್ನ. ಎಲ್ಲಾರೂ ಮೈಸೂರು ಪೇಟದಲ್ಲಿ ಜರ್ಬಾಗಿ ಕಾಣಿಸ್ತಿದ್ರು. ಕಾರ್ಯಕ್ರಮಗಳ ಮಧ್ಯೆ ಇರೋ ಸಮಯದಲ್ಲಿ ಒಂದು ಹುಡುಗಿ ಸೊಗಸಾಗಿ ಹಾಡಿದ್ಲು. ಇನ್ನೊಬ್ಬಳು ಕೀಬೋರ್ಡ್ ನುಡಿಸಿದಳು.

ಆಕೆ: ಹೌದು ಹೌದು. ಅದೇ ತರಹ ಇನ್ನೊಬ್ಬ ತಂದೆ ಮಗಳು ನಡೆಸಿದ್ದ ಕಾರ್ಯಕ್ರಮ ಬಂತಲ್ಲ, ಸುನಿಲ್ ಶಂಕರ್ ನಡೆಸಿದ್ದು. ಬೇರೆ ಬೇರೆ ಜಾಹೀರಾತುಗಳನ್ನ ಶಾಸ್ತ್ರೀಯ ಸಂಗೀತದ ಹಾಗೆ ಹಾಡಿದ್ದು ತಮಾಷಿಯಾಗಿತ್ತು.

ಆತ: ಆಮೇಲೆ, ಕೊನೆಯಲ್ಲಿ ಅದೇನು ಜನಗಣಮನ ಹಾಡಿದ್ರಲ್ಲ?

ಮಗಳು: ಇಲ್ಲಿ ಕನ್ನಡಕೂಟದ ಕಾರ್ಯಕ್ರಮ ಮುಗಿಸೋದೇ ಹಾಗೆ; ಅಮೆರಿಕ ಮತ್ತೆ ಭಾರತ, ಎರ್ಡೂ ದೇಶದ ರಾಷ್ಟ್ರಗೀತೆ ಹಾಡ್ತಾರೆ. ನಮ್ಮ ಬೇರು ಭಾರತದ್ದು, ಆದರೆ ಕೊಂಬೆ ಹರಡಿರೋದು ಇಲ್ಲಿ ಅಲ್ವಾ, ಅದಕ್ಕೆ.

ಆಕೆ: ಹೌದೇನೇ? ಸರಿ, ಈಗ ತೊಗೋಳೋದೆಲ್ಲ ತೊಗೊಂಡು ಬಂದಾಯ್ತೇನೇ? ಮನೆಗೆ ಹೊರಡಣ ಬೇಗ; ಮಗೂಗೂ ಹಸಿವಾಗತ್ತೆ.


ಹೀಗೆನ್ನುತ್ತಾ, ಅವರೆಲ್ಲರೂ ಹೊರಡಲು ಸಿದ್ಧರಾಗ್ತಾ ಇದ್ದ ಹಾಗೆ, ನನ್ನ ಜಂಗಮ ಗಂಟೆ (ಮೊಬೈಲ್!) ರಿಂಗಿಸಿತು.

ನನ್ನಾಕೆ "ರೀ, ನಾನು ನನ್ನ ಪರ್ಸ್ ಮರೆತಿದೀನಿ.. ಬೇಗ ಬನ್ನಿ ಇಲ್ಲಿ ಕ್ರೆಡಿಟ್ ಕಾರ್ಡ್ ಕೊಡಕ್ಕೆ." ಎಂದು ಉಲಿಯುತ್ತಿದ್ದಂತೆ, ದೇವರೆ, ಇದು ಎಷ್ಟನೇ ಸಲ ಆಗ್ತಿರೋದು, ಇಪ್ಪತ್ತನೆ ಸಲ ಇರಬಹುದಲ್ವಾ, ಯಾಕೋ ಲೆಕ್ಕ ತಪ್ಪಿಹೋಗಿದೆ. ಅಂತ ಯೋಚಿಸುತ್ತಾ ನಾನು ಅಂಗಡಿಯೊಳಗೆ ಧಾವಿಸಿದೆ. ◈

## ಕನ್ನಡಿಗರ ಕಣ್ಮಣಿ ಡಾ.ರಾಜ್‌ಗೊಂದು ನುಡಿನಮನ

ಅಭಿನಯದಲಿ ಮೇರು, ನೀ ಗಾಯಕ ನಾಯಕನಾಗಿ ಅಸಾಮಾನ್ಯ
ನಿನ್ನ ಪಾತ್ರಗಳಲಿ ಚಿತ್ರಗಳಲಿ ಸಾಮಾಜಿಕ ಕಳಕಳಿಗೆ ಪ್ರಾಧಾನ್ಯ
ಬಣ್ಣ ತೊಡಿಸಿ ಕೋಟಿ ಕಣ್ಣಿಗೆ ಉಣಿಸಿ ನಿನ್ನ ಕೊಡುಗೆ ಅನನ್ಯ
ಸಾರ್ವಭೌಮನಾದರೂ ವಿನಯದ ನಡತೆಯಲಿ ನೀ ಶ್ರೀಸಾಮಾನ್ಯ
ನೋಡಲು ಮುಟ್ಟಬರಲು ಸದಾ ಸಹಸ್ರಾರು ಅಭಿಮಾನಿಗಳ ಸೈನ್ಯ
ಕನ್ನಡದ ಬಲವಾಗಿ, ನಿನ್ನ ನಾಡು ನುಡಿ ಪ್ರೇಮದಿಂದ ನೀ ಮಾನ್ಯ
ಕಲೆ ಮತ್ತು ಕನ್ನಡ ಇವೆರಡೆ ನಿನ್ನುಸಿರು, ಇರಲಿಲ್ಲ ಅನ್ಯ
ಮೆಚ್ಚಿ ನಿನಗೆ ಸಾಟಿಯಿಲ್ಲವೆಂದ ಪಂಚಕೋಟಿ ನಾವುಗಳೆ ಧನ್ಯ
ಹೋದ ಸುದ್ದಿ ಕಿವಿಗೆ ಬಿದ್ದು ಸಿಡಿಲೊಡೆದು ತಂದೊಡ್ಡಿದೆ ಶೂನ್ಯ!

**–ಸುಧಿ ಬೆಂಗಳೂರು**



# ಹಚ್ಚೇವು ಕನ್ನಡದ ದೀಪ

**ಅಶೋಕ ಹಂದಿಗೋಳ**

ಫ್ರೀಮಾಂಟ್, ಕ್ಯಾಲಿಫೋರ್ನಿಯ

ಹ್ವಾದ ಶನಿವಾರ ನವೆಂಬರ್ ೧೮ರಂದ ಸನ್ನಿವೇಲ್ ದೇವಾಲಯದ ಸಭಾಂಗಣದೊಳಗ ಹಬ್ಬದ ಸಡಗರಾನ ಸಡಗರ. ಉತ್ತರ ಕ್ಯಾಲಿಫೋರ್ನಿಯಾ ಕನ್ನಡಕೂಟದ ಸದಸ್ಯ ಕುಟುಂಬದವರೆಲ್ಲ ಸೇರಿ ಒಂದಲ್ಲ... ಎರಡು ಹಬ್ಬಾನ ಒಟ್ಟಿಗೇ ವಿಜೃಂಭಣೆಯಿಂದ ಆಚರಿಸಿದರು. ಮನಿ ಮತ್ತ ಮನಸ್ಸಿನ್ಯಾಗಿನ ಕತ್ತಲಾ ಓಡಿಸಿ ಜ್ಞಾನದ ಜ್ಯೋತಿಯನ್ನ ಬೆಳಗೋ ದೀಪಾವಳಿ ಸಂಭ್ರಮಾ ಒಂದು ಕಡೆ ಆದ್ರ ಹರಿದ ಹಂಚಿಹೋಗಿದ್ದ ಕನ್ನಡನಾಡಿನ ಪ್ರಾಂತಗಳೆಲ್ಲ 'ಅಖಂಡ ಕರ್ನಾಟಕ' ಅಂತ ಏಕೀಕರಣಗೊಂಡ ಸುವರ್ಣ ಮಹೋತ್ಸವದ ವರ್ಷದ ರಾಜ್ಯೋತ್ಸವ ಇನ್ನೊಂದು ಕಡೆ.

ಮಧಾಹ್ನ ೩:೩೦ ಹೊಡಿತಿದ್ದಂಗ ಸಭಾಂಗಣಕ್ಕ ಬರ್ಲಿಕ್ಕೆ ಹತ್ತಿದ ಹುರುಪಿನ ಸದಸ್ಯರಿಂದ ಹಬ್ಬದ ವಾತಾವರಣಕ್ಕ ಕಳೀ ಏರ್‍ಲಿಕ್ಕೆ ಹತ್ತು. ಕೂಟದ ಸಮಿತಿಯ ಪರವಾಗಿ ಉತ್ಸಾಹೀ ಸ್ವಯಂಸೇವಕರಿಂದ ಆತ್ಮೀಯ ಸ್ವಾಗತ. ಹಬ್ಬ ಅಂದಮ್ಯಾಲೆ ಕೇಳಬೇಕ..ಮಹಿಳಾಮಣಿಗಳ ಬಣ್ಣಬಣ್ಣದ ರೇಶ್ಮೀಸೀರಿ, ಸಣ್ಣಸಣ್ಣ ಹುಡುಗಿಯರ ಜರತಾರಿ ಲಂಗ ಎಲ್ಲಾ ಝುಗಝುಗ ಮಿಂಚತಿದ್ವು.

ಪ್ರಾಂಗಣದೊಳಗ ಕಾಲಿಡತಿದ್ದಂಗ ಎಲ್ಲಾರ ಕಣ್ಣು ಸೆಳದಿದ್ದು ಸುವರ್ಣ ಕರ್ನಾಟಕದ ವಿಶೇಷ ಅಲಂಕಾರ. ನೂರಾರು ವಿದ್ಯುದ್ದೀಪಗಳ ನಡುವ ಕಂಗೊಳಿಸೋ ಕನ್ನಡಾಂಬೆ ಭುವನೇಶ್ವರಿ, ಅಕೀಸುತ್ತೂ ಸಂಗೀತ ಮತ್ತ ಸಾಹಿತ್ಯದ ಮುಖೇಣ ಕನ್ನಡಮ್ಮನಿಗೆ ಸೇವಾ ಸಲ್ಲಿಸಿದ ಹಲವಾರು ಗಣ್ಯರ ಭಾವಚಿತ್ರಗಳು. ಪುರಂದರ, ಕನಕ, ಬಸವ, ವೀಣೆ ಶೇಷಣ್ಣ, ದೊರೆಸ್ವಾಮಿ ಅಯ್ಯಂಗಾರ್ರು, ಟಿ. ಚೌಡಯ್ಯ ಮುಂತಾದ ಸಂಗೀತರತ್ನರು, ಬೇಂದ್ರೆ, ಕುವೆಂಪು, ಮಾಸ್ತಿ ಮುಂತಾದ ಸಾಹಿತ್ಯರತ್ನರು (ಇವರೆಲ್ಲ ಜ್ಞಾನಪೀಠ ಪ್ರಶಸ್ತಿ ವಿಜೇತರು ಅನ್ನೂದು ವಿಶೇಷ), ಸಂಗೊಳ್ಳಿ ರಾಯಣ್ಣ, ಚೆನ್ನಮ್ಮ ಮುಂತಾದ ಸ್ವಾತಂತ್ರ್ಯ ಹೋರಾಟಗಾರರು, ಎರಡೂ ಬಾಜೂ ಬೇಲೂರು–ಹಳೇಬೀಡಿನ ಶಿಲಾಬಾಲಿಕೆಯರು. ಕುಸುಮಾ ಅರಕಲಗೂಡು ಮತ್ತ ತಂಡದವರ ಪರಿಶ್ರಮ ಎದ್ದುಕಾಣ್ತಿತ್ತು.


ವೇದಿಕಿ ಮ್ಯಾಲೆ ಕಾರ್ಯಕ್ರಮಗಳು, ಸಣ್ಣಮಕ್ಕಳು 'ಹಚ್ಚೇವು ಕನ್ನಡದ ದೀಪಾ' ಅಂತ ಹಾಡುವುದರ ಕೂಡ ಚಾಲೂ ಆದ್ವು. ಅದು ಮುಗದಮ್ಯಾಲೆ ಸ್ಟೇಜು ತುಂಬ ಓಡಾಡ್ಕೋತ ಕಾಯಿಪಲ್ಲೆಗಳು ಕುಣಿಲಿಕ್ಕೆ ಹತ್ತಿದಾಗ ಎಲ್ಲಾ ಸಭಿಕರ ಕುತೂಹಲ ಕೆರಳಿತ್ತು. ಸವಿತಾ ಚಂದ್ರಶೇಖರ್ ಅವ್ರು ನಿರ್ದೇಶನಾ ಮಾಡಿದ ಮಕ್ಕಳ ನೃತ್ಯ ಬ್ಯಾರ್‍ಬ್ಯಾರೆ ತರಕಾರಿಗಳ ಬಣ್ಣನಾ ಮಾಡ್ತು. ಅದಾದಮ್ಯಾಲೆ 'ಉಪಾಯದಿಂದ ಅಪಾಯ ಪರಿಹಾರ' ಎಂಬೋ ಮಕ್ಕಳ ನೃತ್ಯ ನಾಟಕಾನ್ನ ಉಮಾ ಕಳಸಾಪೂರ್ ಅವ್ರು ನಾನಾ ನಮೂನಿ ಬಣ್ಣಬಣ್ಣದ ಹಕ್ಕಿಗಳ ವೇಷಾ ಹಾಕ್ಕೊಂಡು, ರೆಕ್ಕಿ ಬೀಸ್ಕೋಂತ, ಸುಮಧುರ ಕಲರವ ಮಾಡ್ಕೋಂತ ಮಕ್ಕಳು ಒಂದು ಛೆಂದನ ಲೋಕಾನ ಸೃಷ್ಟಿಸಿದ್ರು.

ನಮ್ಮ ಯುವಜನಾಂಗದೊಳಗ ಕರ್ನಾಟಕದ ಚರಿತ್ರಿ, ಸಾಂಸ್ಕೃತಿಕ ಶ್ರೀಮಂತಿಕಿ ಬಗ್ಗೆ ಆಸಕ್ತಿ ಮೂಡಿಸೋ ಸುವಿಚಾರದಿಂದ ಕೂಟ ಮಕ್ಕಳ ನಿಬಂಧ ಸ್ಪರ್ಧಾ ನಡಿಸಿದ್ರು. ಅದರೊಳಗ ಅತ್ಯುತ್ತಮವಾಗಿ ಬರೆದ ಮಕ್ಕಳಿಗೆ ಬಹುಮಾನ ವಿತರಣಾ ಮಾಡಲಾಯ್ತು.

ಕನ್ನಡ ಕಲಿ ಅನ್ನೂದು ಕನ್ನಡಕೂಟ ಈ ವರ್ಷ ಸುರೂಮಾಡಿದ ಒಂದು ಹೆಮ್ಮೆಪಡೋ ಸಫಲ ಪ್ರಯತ್ನ ಅನ್ನಬಹುದು. ಎಪ್ಪತ್ತಕ್ಕೂ ಹೆಚ್ಚು ಮಕ್ಕಳು ಪ್ರತಿ ಶನಿವಾರಕ್ಕೊಮ್ಮೆ ಕನ್ನಡಾನ್ನ ಮಾತಾಡ್ಲಿಕ್ಕೆ, ಬರೀಲಿಕ್ಕೆ ಎಷ್ಟು ಹುರುಪಲೇ ಬರ್ತಾರ ಅಂತ ಪ್ರಾಂಶುಪಾಲರಾದ ಸಂಧ್ಯಾ ರವೀಂದ್ರನಾಥ್ ಅವರು ವಿವರಿಸಿದರು. ಆ ಎಲ್ಲಾ ಮಕ್ಕಳು ವಿಶಾಲ ವೇದಿಕೆಯನ್ನ ಆವರಿಸಿ ಸುಮಧುರವಾಗಿ ಒಂದರಮ್ಯಾಲೆ ಒಂದು ಕನ್ನಡಪದ್ಯಗಳ್ನ ನಿರರ್ಗಳವಾಗಿ ಹಾಡ್ದಾಗ, ಅನೇಕ ಸ್ವಯಂಸೇವಕ ಶಿಕ್ಷಕ/ಶಿಕ್ಷಕಿಯರ ಮೆಹನತ್ತು ನಮ್ಮ ಮುಂದಿನ ಪೀಳಿಗಿಯ ಕನ್ನಡ ಭಾಷಾ ಮತ್ತ ಸಂಸ್ಕೃತಿಯ ಬೇರುಗಳ್ನ ಎಷ್ಟು ಮಜಬೂತು ಮಾಡ್ಲಿಕ್ಕೆ ಹತ್ತೇದ ಅನ್ನೂದು ಖಾತ್ರಿ ಆತು.

ಈ ನಡಕ ಕ್ಯಾರಿಯೋಕಿ ಸಂಗೀತದ ಜೋಡಿ ಸುಮುಖ್ ಶೇಖರ್ ಹಾಡಿದ 'ಆರಾಧಿಸುವೆ ಮದನಾರಿ' ಹಾಡು ಕೇಳ್ದಾಗ ಅಣ್ಣಾವ್ರನ್ನ ಇತ್ತೀಚೆಗೆ ಕಳಕೊಂಡ್ವೆಲ್ಲಾ ಅಂತ ಮನಸ್ಸಿನ್ಯಾಗ ಹಳಾಹಳೀ ಆತು.

ಮುಂದ ಏನಪಾ ಕಾರ್ಯಕ್ರಮ ಅಂತ ನೋಡೂದ್ರೊಳಗ ಬದರಿ ಪ್ರಸಾದ್ ಅವ್ರು ತಯಾರು ಮಾಡಿದ ಯುವರಾಗ ಸಂಗೀತ ಕಾರ್ಯಕ್ರಮ ಎಲ್ಲಾರ ಮನಸ್ಸು ಸೆಳೀತು. ಹಾರ್ಮೋನಿಯಂ, ತಬಲಾ, ಮೃದಂಗ, ಕೀಬೋರ್ಡ್,



‘ಅಂಬಿಕಾತನಯದತ್ತ’ ಎಂಬ ಕಾವ್ಯನಾಮದಿಂದ ವಿಖ್ಯಾತರಾದ ದತ್ತಾತ್ರೇಯ ರಾಮಚಂದ್ರ ಬೇಂದ್ರೆ (1896-1981) ಇಪ್ಪತ್ತನೆಯ ಶತಮಾನದಲ್ಲಿ ಕನ್ನಡಕ್ಕೆ ದೊರೆತ ಮಹಾಕವಿ. ಈ ವರ್ಷದ ದೀಪಾವಳಿಗೆ ಬೇಂದ್ರೆಯವರು ನಮ್ಮನ್ನಗಲಿ ಇಪ್ಪತ್ತೈದು ವರ್ಷಗಳಾದುವು. ದ.ರಾ.ಬೇಂದ್ರೆಯವರ ಈ ರೇಖಾಚಿತ್ರ, ನಾಗರಾಜ ಪಾಟೀಲರ ಕೈಯಲ್ಲಿ ಜೀವಕಳೆಯೊಂದಿಗೆ ಮೂಡಿಬಂದಿದೆ.

ಪಿಟೀಲು ಇನ್ನೂ ರಗಡ ವಾದ್ಯಗಳನ್ನ ಎಷ್ಟು ಛಂದ ನುಡಿಸಿದ್ರು ಅನ್ನೂದಕ್ಕ ಮ್ಯಾಲಿಂದಮ್ಯಾಲೆ ಬಿದ್ದ ಸಭಿಕರ ಚಪ್ಪಾಳೀನ ಸಾಕ್ಷಿ ಆಗಿತ್ತು. 'ಭಾಗ್ಯದ ಬಳೆಗಾರ', 'ದೋಣಿ ಸಾಗಲಿ', 'ಜೀವ ವೀಣೆ', ಸ್ವೀಡನ್ನಿನ ಜಾನಪದ ಗೀತೆಗಳ್ನ ಕೇಳ್ದಾಗ ಆ ಹುಡುಗ್ರಿಗೆ ಛೊಲೋ ಭವಿಷ್ಯ ಕಾದದ ಅನ್ನುಸ್ತು. ನಮ್ಮ ಭೀಮಣ್ಣಾವ್ರು ಜನಪ್ರಿಯಗೊಳಿದ 'ಭಾಗ್ಯದ ಲಕ್ಷ್ಮೀ ಬಾರಮ್ಮ' ಕೇಳಿದಾಗ್ಲಂತೂ ಎಂಥಾ ಮನಸ್ಸಿಲ್ಲದ ಲಕ್ಷ್ಮೀನೂ ಓಡಿ ಬರತಾಳ ಅಂತ ನಾ ಅಂದ್ಕೊಂಡೆ.

ಕರ್ನಾಟಕದ ತುಳುನಾಡಿನ ವಿಶಿಷ್ಟ ಧಾರ್ಮಿಕ ಸಂಪ್ರದಾಯವನ್ನ ಬಿಂಬಿಸೋ ಭೂತದ ಕೋಲ ಭಾಳ ಮಂದಿಗೆ ಕುತೂಹಲಕಾರಿ ಅಷ್ಟ ಅಲ್ಲ, ಮನರಂಜನಾಕರವಾಗಿಯೂ ಇತ್ತು. ರಘುರಾಂ ಶೆಟ್ಟಿಯವರು ರಚಿಸಿ, ನಿರ್ದೇಶಿಸಿ, ಖರೇವಂದ್ರೂ ದೆವ್ವ ಮೈಮ್ಯಾಲೆ ಬಂದವರ್–ಹಾಂಗ ಸಭಾಂಗಣದ ತುಂಬ ಓಡಾಡಿ ಕುಣಿದಿದ್ದು ಎಲ್ಲಾರ ಮೆಚ್ಚಿಗಿ ಗಳಿಸಿದ್ರು. ಸ್ಪೈಡರ್‌ಮ್ಯಾನ್, ಸುಪರ್‌ಮ್ಯಾನ್ ಅಂಥವರನ್ನ ಆರಾಧಿಸೋ ಇಲ್ಲೀ ಹುಡುಗ್ರು ಪಂಜುರ್ಲಿ ಭೂತ ನೋಡಿ 'ಕೂಲ್' ಅಂತ ಉದ್ಗರಿಸಿದ್ದು ಆಶ್ಚರ್ಯ ಏನಲ್ಲ ಬಿಡ್ರಿ.

ಊಟದ ವಿರಾಮದ ನಂತರ 'ಕನ್ನಡದ ಋಷಿಗಳೇ ತಲೆಬಾಗಿ ನಮಿಪೆ'; ಕನ್ನಡದ ಐವರು ಪ್ರಸಿದ್ಧ ಕವಿಗಳ ಕವಿತೆಗಳನ್ನಾಧರಿಸಿದ ಸುಂದರ ಕಾರ್ಯಕ್ರಮ. ಅಗದೀ ಜನಪ್ರಿಯವಾದ 'ಕೋಳಿಕೆ ರಂಗ', 'ಇಳಿದು ಬಾ', 'ಬ್ರಹ್ಮ ನಿಂಗೆ', 'ನಟನವಾಡಿದಳ್' ಮತ್ತ 'ಎಲ್ಲಾದರು ಇರು' ಕವನಗಳಿಗೆ ಧ್ವನಿಮುದ್ರಿತ ಸಂಗೀತದ ಜೋಡಿ ಕಣ್ಸೆಳೆಯೋ ನೃತ್ಯಗಳು. ಕುಸುಮಾ ಅರಕಲಗೂಡು ಅವರು ನಿರ್ವಹಿಸಿಕೊಟ್ಟ ಕಾರ್ಯಕ್ರಮ ಕನ್ನಡದ ಋಷಿಗಳಿಗೆ ಒಪ್ಪುವಂಥ ನಮನ ಆಗಿತ್ತು.

೨೦೦೬ ವರ್ಷದ ಕನ್ನಡ ಕೂಟದ ಕಾರ್ಯಕಾರಿ ಸಮಿತಿ ಭಾಳ ಛೊಲೋ ಕೆಲಸಾ ಮಾಡೇದ ಅನ್ನೂದು ಹೊಗಳಿಕಿ ಅಂತಲ್ಲ ಒಂದು ಹೆಮ್ಮಿ ವಿಷಯ. ಕೂಟ ಹಮ್ಮಿಕೊಂಡ ಹಲವಾರು ಚಟುವಟಿಕೆಗಳಿಗೆ ವರ್ಷಪೂರ್ತಿ ಅವಿರತವಾಗಿ ಸೇವಾ ಸಲ್ಲಿಸಿದ ಸಮಿತಿಯ ಸದಸ್ಯರೆಲ್ಲ ವೇದಿಕೆಯ ಮ್ಯಾಲೆ ಒಟ್ಟಿಗೆ ಬಂದು 'ಜಯ ಭಾರತ ಜನನಿಯ ತನುಜಾತೆ' ಅಂತ ಕನ್ನಡಮ್ಮನಿಗೆ ಜೈಕಾರ ಹಾಕಿದ್ದು ವಿಶಿಷ್ಟ ಆಗಿತ್ತು.

ಕನ್ನಡಕೂಟದ ಬೋರ್ಡ್ ಆಫ್ ಟ್ರಸ್ಟೀಸ್‌ಗೆ ಮುಂದಿನ ಎರಡು ವರ್ಷಗಳ ಅವಧಿಗೆ ರಮೇಶ್ ಶಿರ್ಸಿ ಚೇರ್‌ಮನ್, ಅಲಮೇಲು ಅಯ್ಯಂಗಾರ್ ವೈಸ್‌ಚೇರ್‌ವುಮನ್ ಮತ್ತ ಸತೀಶ್ ಸ್ವಾಮಿ, ನರೇನ್ ಕುನ್ಹೋಡಿ, ಕಾವ್ಯ ಕುರುಬುರ್ ಟ್ರಸ್ಟೀಸ್ ಆಗಿದ್ದಾರೆಂದು ಹಾಲಿ ಚೇರ್‌ಮನ್ ರವಿ ರವೀಂದ್ರನಾಥ್ ಘೋಷಣಾ ಮಾಡಿದ್ರು. ಅಷ್ಟ ಅಲ್ಲದ ಕನ್ನಡಕೂಟದ ೨೦೦೭ನೇ ವರ್ಷಕ್ಕ ಕಾವ್ಯ ಕುರುಬೂರ್ ಅಧ್ಯಕ್ಷಿಣಿ ಆದದ್ದನ್ನು ಘೋಷಿಸಲಾಯ್ತು.

'ಬೇಂದ್ರೆ ನಮನ' ಆ ಸಂಜೀ ಕಡೀ ಕಾರ್ಯಕ್ರಮ. ಕನ್ನಡ ಸಾಹಿತ್ಯರತ್ನರೊಳಗ ಒಬ್ಬರಾದ ದ.ರಾ. ಬೇಂದ್ರೆಯವರ ಇಪ್ಪತ್ತೈದನೇ ಪುಣ್ಯತಿಥಿ ಸ್ಮರಣಾರ್ಥ 'ಮೂಡಲಮನೆ' ಮೂಲಕ ಮನೀ ಮಾತಾಗಿರೋ ವಿಜಯಾ ಯಕ್ಕುಂಡಿಯವರು ನಿರ್ದೇಶಿಸಿದ ಸಂಗೀತ, ಸಾಹಿತ್ಯ, ನೃತ್ಯಗಳ ಅಪೂರ್ವ ಸಂಗಮವಾದ ಆ ಕಾರ್ಯಕ್ರಮ ದತ್ತೂಮಾಸ್ತರರ ಊರಾದ ಧಾರವಾಢದ ಪೇಢೆ ಹಾಂಗ ಸಿಹಿ, ಕಂಪು ಮತ್ತ ಮಧುರತನಾನ್ನ ಎಲ್ಲಾರಿಗೂ ಹಂಚಿತ್ತು. ಚುಮುಚುಮು ನಸುಕಿನ ಮಂಜುಕವಿದ ದೃಶ್ಯದೊಳಗ 'ಮೂಡಲ ಮನೆಯ ಮುತ್ತಿನ ನೀರಿನ' ಹಾಡಿನಿಂದ ಸುರುವಾದ ಆ ರಸದೌತಣ 'ಶ್ರಾವಣ ಬಂತು', 'ನಾರೀ ನಿನ್ನ ಮಾರಿ ಮ್ಯಾಲ', 'ಕುಣಿಯೋಣುಬಾರಾ'ದಂಥ ಅಮೋಘ ಕವನಗಳ ಕೂಡ ಮುಂದುವರೀತು. 'ಬೆಳದಿಂಗಳಾ ನೋಡ' ಹಾಡನ್ನ ಸವಿಯುವಾಗ್ಲಂತೂ ನಮ್ಮೆಲ್ಲರ ಹೃದಯಗಳು ಮಂತ್ರ–ಮುಗ್ಧ ಆಗಿಬಿಟ್ಟಿದ್ವು. 'ಒಂದೇ ಒಂದೇ ಕರ್ನಾಟಕ ಒಂದೇ' ಅನ್ನೂ ಅಂಬಿಕಾತನಯದತ್ತರ ಧೀರ ಘೋಷಣಾ ಸುವರ್ಣ ಕರ್ನಾಟಕದ ವಿಜೃಂಭಣೆಯ ತೇರಿಗೆ ವಜ್ರದ ಕಳಸ ಇಟ್ಟಾಂಗಿತ್ತು. ನಚಿಕೇತ ಶರ್ಮ ಹಾಗು ಸಂಗಡಿಗರ ಸಂಗೀತ ಸಂಯೋಜನಾ ಮತ್ತ ಗಾರ್ಗಿ ಪಂಚಾಂಗಂ ಹಾಗೂ ವೃಂದದವರ ಮನೋಹರ ನೃತ್ಯಗಳಿಗೆ ತಲೆದೂಗಿ 'ಶಾಬ್ಬಾಷ್' ಅನ್ನದವರು ಯಾರೂ ಇರ್‌ಲಿಕ್ಕಿಲ್ಲ !

ಆ ಸಂಜೆಯ ಎಲ್ಲ ಕಾರ್ಯಕ್ರಮಗಳನ್ನ ನಿರೂಪಿಸಿ ಕೊಟ್ರು ಉತ್ಸಾಹೀ ದಂಪತಿಗಳಾದ ಶುಭಾ ಮತ್ತು ಶ್ರೀನಾಥ್. ಮಕ್ಕಳು ಹಾಡಿದ ಅಮೇರಿಕಾ ಮತ್ತ ಭಾರತದ ರಾಷ್ಟ್ರಗೀತೆಗಳೊಂದಿಗೆ ಎಲ್ಲರೂ ಶುಭರಾತ್ರಿ ಹೇಳುತ್ತ ಬೀಳ್ಕೊಂಡ್ರು. ಇಂಥಾ ಒಂದು ಸುಂದರ ಸಂಜೆಯನ್ನ ಸೃಷ್ಟಿಸಿದ್ದಕ್ಕ, ದೀಪಾವಳಿ ಮತ್ತ ರಾಜ್ಯೋತ್ಸವ ಹಬ್ಬಗಳನ್ನ ಸಾವಿರಾರು ಮೈಲಿ ಕನ್ನಡನಾಡಿನಿಂದ ದೂರ ಇರೋ ಕನ್ನಡದ ಕಂದಮ್ಮಗಳು ಒಟ್ಟಿಗೇ ಸೇರಿ ಆಚರಿಸೋ ಅವಕಾಶ ಮಾಡಿಕೊಟ್ಟಿದ್ದಕ್ಕ ಉತ್ತರ ಕ್ಯಾಲಿಫೋರ್ನಿಯಾ ಕನ್ನಡಕೂಟ ಹೆಮ್ಮೆ ಪಡಬೇಕು. 'ಎಲ್ಲಾದರು ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು' ಅನ್ನೋ ಕವಿವಾಣೀನ ಖರೇ ಮಾಡೂದಕ್ಕ ಕನ್ನಡದ ಋಷಿಗಳ ಆಶೀರ್ವಾದ ನಮ್ಮ ಮ್ಯಾಲೆ ಯಾವಾಗಲೂ ಇರ್ಲಿ ಅಂತ ಆಶಾ ಮಾಡೂಣಂತ! ◈